Karnataka Field Institutes March - 2016 Issue No.: 43

# ಬಯಲು Bayalu

*....a space of our own*



Table of Contents


1. Letter to Raja: *Peri* ..... 3

2. A Lady in a Private Bus: *Ravindra Jain* ..... 4

3. ಮುಚ್ಚಿದ ಬಾಗಿಲು (The closed door): *ರಾಘವೇಂದ್ರ ಹೇರ್ಳೆ ಜಿ* ..... 5

4. Let's mar our hypocrisy in March: *Rajesh S Mahantmath* ..... 6

೫. ಮರಳಿ ಯತ್ನವ ಮಾಡು (Try again) : *ಗೋಪಾಲಕೃಷ್ಣ ಐ..* ..... 7

೬. ನಾನೊಬ್ಬ ಮಹಿಳೆ (ಸ್ತ್ರೀ) ಎನ್ನುವುದಕ್ಕೆ ನನಗೆ ಹೆಮ್ಮೆ( I feel proud to be a women) : *ಯಮುನಾ ಬೆಸ್ತರ್* ..... 8

೭. ಬಂಗಾರದ ಕೂದಲು V/S ಕೈ ಗಡಿಯಾರ (Golden hair v/s wrist watch) : *ಗುಂಡಪ್ಪ ಕಾಟೀಕರ್* ..... 10

೮. "ಸಾವಿರ ವ್ಯಕ್ತಿಗಳ ಪ್ರಭಾವಕ್ಕಿಂತ ಸ್ವಶಕ್ತಿ ಸಾವಿರ ಪಾಲು ಶಕ್ತಿಯುತವಾದದ್ದು" (Self confidence is mightier than the infulence of thousand people): *ರಮೇಶ ಕುಮಾರ.ಡಿ ಬಡಿಗೇರ* ..... 11

೯. ನಗ್ನ ಸತ್ಯಗಳು (Bare truths) : *ಹನುಮಂತ ರಾಜು* ..... 12

೧೦. ತುಂಬಾ ವಿಚಿತ್ರ ಅಲ್ವಾ ಗೆಳೆಯರೆ (Very strange! Isn't it my friends.?): *ರೇಣುಕಾ ಹೇಗ್ಗಣದೊಡ್ಡಿ* ..... 13

೧೧. ಬದುಕನ್ನು ಎಂಜಾಯ್ ಮಾಡೋಣ (Enjoy the life) : *ಅನ್ವರ್ ಎಮ್..* ..... 13

೧೨. ಚೆಲುವಿನ ಬಲೆ (beauty is an web) : *ಹನುಮಂತ ರಾಜು* ..... 14

13. Cool Clicks: *by Guru Moger* ..... 15




## 1. Letter to Raja

- Peri

Dear Raja,

Yesterday you had come with your new bride for a chat. It was a very nice chat and I enjoyed your company. She did not speak. You were complaining that she is like that, she does not speak. She was just smiling. You consistently kept persisting with her to speak. I told you that she would speak when she wanted. We continued our discussion. You were asking my advice for a better living as I told you sincerely that I did not know. Moreover these days I have stopped giving advice to others, sinc e, I sincerely feel that I know nothing on better living that could be considered worthy of sharing with others.




Today being women's day, I was thinking of your bride. I could see the anxiety in her eyes. I was thinking what could make her comfortable. What could make her secure and feel strong and free and confident? You were telling her that you respected me. I was feeling that it was meaningless. She did not know me and moreover she did not know you! Can you give time to her? To settle, to understand you and her immediate surrounding in her own pace. Can you just leave her to find herself, her own self, in the new context, new environment, new family and the new world? This will require a lot of energy. To do nothing, but, give her support to find herself. To just be with her to build the family together.

Raja, as you move forward, you will see that there are differences between you and her. We men do not know nor acknowledge menstruation. From acute pain to mood swing it is altogether an uneasy time for her. My friend used to say that during those days of pain, her husband used to prepare some warm water and give it to her which was soothing. I asked her how a warm water will help in that situation. She said, "It is not the warm water, but the act that you care is what matters". And mind you this is not occasional, it is every month.




I have found that majority of us, do not know of pregnancy or child rearing. We have not been part of it, leave aside experiencing it. Can you be with her during the pregnancy? Do we know and understand and feel what it is to have another living organism growing inside us. It is such a complex process. She is undergoing such a lot of change. Can you be with her every day seeing change happening? Can you be with her in those every day tiny moments, feeling the growth, enjoying life? It was Osho Rajneesh who said that a true man partners equally with the woman during pregnancy and childbirth. If he cannot play this partnering role he is like a disposable syringe!

Can you keep the career aside, in the backburner for some time till the child grows? I know of Macho men who have taken care of both the mother and the child. Raja, can you bring up your child? The stereo types we have is of the father scolding the mother for child's mistake. That is easy. But, can you be with the child, till the child says I don't need you and surprisingly the child says, "I don't need you" very soon. Child rearing is such a thing, it has everything, state of mind, attitude, intuition, knowledge, skill and human relation. Can you be with her in those alive days?

Very soon my friend, she will be immersed in mundane things. Cleaning, washing, cutting, cooking, arranging, setting, resetting . . . And looking after your children and you. Can you Raja, avoid this. Can you work towards getting a decent job for her? Both of you working is very important. It places both of you in an equal footing. From where you can function as partners, rue partners! Now, there is a danger in this. Like many of us, please don't let her end up doing both the job outside and the chores of the house keeping inside. Can you Raja, share the mundane chores with her, the cleaning, washing, cutting, cooking, arranging, setting, resetting . . . . And looking after the children, can you? I have a friend who cannot cook, not even boil potatoes. But, his wife is not unhappy with him because he cleans everything and that he does excellently. I know of couples where the wife does not like to cook and the husband enjoys cooking and even serving. These are happy couples. Doing what suits them and what they like and want to do without bothering much about the image and "What will others say?" Can you Raja be with her all through in good and bad times, in important events and mundane chores? Just be with her!

***

## 2. A Lady in a Private Bus

**- Ravindra Jain**

The time was around 5 clock in the evening, I was sitting in a moving private bus, thinking to find an idea to commemorate the World Women's Day. Suddenly, a pretty young woman was shouting at a boy. She had a mobile phone in her hand and was saying 'Conductor come here, come here, that guy has taken a photo of mine by his cellphone', she was asking the password of that mobile with that boy. Immediately, a college Principal supported that lady and scolded that misbehaving boy and got the password. Meanwhile, the friends of that boy who were present in the bus have started supporting and saying 'he didn't took the photo'. Amidst, Conductor was telling the driver to take the bus to police station. After checking the mobile, the photo was there, in which most of the faces of the passengers were present including that girl (girl was telling; 'when he was taking the photo I turned towards him, because of which, he took faces of all instead of taking my photo'). Soon after knowing that the photo has covered more people including that girl, the friends of that guy started shouting at Conductor and Principal and co-passengers who were supporting the girl.



After some time, the bus stopped at a place and around 25 people were in front of the bus and few came inside. Some of them have threatened the Principal, Conductor and other passengers who were supporting the girl. They said 'the bus goes in this route every day, we will see you tomorrow' and went out of the bus. Everyone was

discussing the issue with each other. One of the co-passengers started scolding the Principal for supporting the lady and even some of the ladies were also saying ‘what if a boy takes photo of a girl, he is boy anyway, what is wrong in that and these days the ladies acting as if they are more smarter than ever’ was one of the samples of comment. Bus was moving, in one of the stops, the police have entered, everyone surprisingly watching the arrival of the police. No one knows who called the police. The police personnel have took the boy, started enquiring in their style (by beating). Then police recorded the statement of the Principal and assured the safety to bus, girl and to Principal, saying ‘you people did a good job, we can understand the anxiety of girl because we also have sisters in home right, and we take the necessary action’.

It was the girl who being threatened by those mobs, has called unto 100 and registered her complaint. It was great courage displayed by that girl. I appreciated her in the spot. It was an incident which shows women are becoming more empowered to protect themselves against any strife, which happens in the name of gender. I was very happy when I shared the incident in my office. The incident occurred on ‘International Women’s day’, and probably this is the best example of fight against gender bias in order to achieve gender parity.

***

## ೩. ಮುಚ್ಚಿದ ಬಾಗಿಲು

– ರಾಘವೇಂದ್ರ ಹೇರ್ಳೆ ಜಿ.

ಸಾಯುತ್ತಾ ಮಲಗಿವೆ ಕನಸುಗಳು,
ಬದುಕಿನ ಗೋರಿಗಳ ಮೇಲೆ ಪಕಳೆಗಳಾಗಿ.
ನಿಡುಸುಯ್ಯುತಿವೆ ಬೆವರಿನ ಹನಿಗಳು,
ರಕ್ತ ಕಣ್ಣೀರಾಗಿ ; ಕೊಳೆತು ನಾರುವ ವ್ರಣಗಳಾಗಿ.

ಮೊಳಗುತ್ತಲೇ ಇವೆ ಸಿಂಹ ಘರ್ಜನೆಗಳು,
ಅರಣ್ಯರೋದನವಾಗಿ ಕೂಪಮಂಡೂಕರ ಆಸ್ಥಾನದಲ್ಲಿ.
ಹೊರಳಾಡುತ್ತಲೇ ಇವೆ ವಿಕೃತ ಆಸೆಗಳು,
ಶರಪಂಜರದ ತೂಗುಯ್ಯಾಲೆಯಲ್ಲಿ
ನೆತ್ತಿ ಮೇಲಿನ ಕತ್ತಿಯಂತೆ ಝಳಪಿಸುತ್ತಾ ತೊನೆಯುತ್ತಿವೆ.

ಬಣ್ಣ ಕಳೆದುಕೊಂಡು ಕಿಲುಬುಗಟ್ಟಿವೆ ಹುಸಿ ಆದರ್ಶಗಳು,
ಅವಮಾನದ ಚಾದರ ಹೊದ್ದ ನಗ್ನ ಸಂತಾನದಂತೆ.
ಭಣಗುಡುತ್ತಿವೆ ಸೆಮಿನಾರುಗಳು; ಕಮ್ಮಟಗಳು
ಭಟ್ಟಂಗಿಗಳ ಹಪಹಪಿತನದ ಪ್ರತಿರೂಪವಾಗಿ.
ಆವರಿಸುತ್ತಿವೆ ಕರಿನೆರಳ ಕಾರ್ಮೋಡಗಳು ಧೊಪ್ಪನೆ,
ಒಂದರ ಮೇಲೊಂದು ಎಣೆಯಾಡುತ್ತಿರುವ ಘಟಸರ್ಪಗಳಂತೆ.

ಗೆದ್ದಲು ಹಿಡಿಯುತ್ತಲೇ ಇದೆ ಉತ್ಸಾಹದ ತಾಯಿಬೇರಿಗೆ,
ಹೊಳೆಗೊರಗಿದ ಮರವೂ ಅಣಕಿಸುತ್ತಿದೆ,
ಬೀದಿನಾಯಿಯ ಪಾಡಿನಂತೆ ಕಲ್ಲುಗಳ ಸುರಿಮಳೆಯಾಗುತ್ತಲೇ ಇದೆ,
ನಿತ್ಯಸತ್ಯದ ಕಥನಕವನಕ್ಕೆ ಮೂಕಹಕ್ಕಿಯ ಪಲ್ಲವಿ ಉಲಿಯುತ್ತಲೇ ಇದೆ.

ಕೀರ್ತಿಶನಿ ಇಲ್ಲದ, ಹಾರ ತುರಾಯಿ ಒಲ್ಲದ
ಬೆತ್ತಲೆ ಜಗತ್ತಿನ ಅವಧೂತನ ಹಾಗೆ
ಕೊನೆಮೊದಲಿಲ್ಲದ ತಿರುವುಗಳ ಚಕ್ರದೊಳಗೆ ಸ್ತಬ್ಧವಾಗಿದೆ ಚಿತ್ರ!!
ಗಮ್ಯ ಯಾವುದು? ಗತಿಯು ಎಲ್ಲಿಯದು?
ಶೇಷಪ್ರಶ್ನೆಗಳ ನಡುವೆ ಬಂದಿಯಾಗಿರುವೆ,
ಭರವಸೆಯ ಬೆಳಕಿಗಾಗಿ ಕುಟುಕುಜೀವ ಹಿಡಿದು ಕಾಯುತಿರುವೆ!




***

## 4. Let's mar our hypocrisy in March

**- Rajesh S Mahantmath**

March is a time when we celebrate a number of days which spread the message of equality, righteousness and brotherhood. March also marks the beginning of spring season or Vasant Rutu.

The festival of Holi almost always falls in March. This is one festival in which people of irrespective of caste, creed, gender and social status participate with traditional fervor. The earlier day after sunset people light bonfires symbolic of the destruction of the evil Holika who intended to kill her nephew Prahlad. In Northern Karnataka the lighting of the bonfire is said to be symbolic of the destruction of Kamadeva (representing carnal desire) by Shiva (the ultimate ascetic). The next day people play not only by spraying colours and coloured water on each other but also by smearing each other with wet mud, animal dung and ash from the previous day's bonfires. While doing so, they are free to speak in foul language with each other and poke fun at one another. We can see people of all religions shedding their inhibitions and playing colours during Holi. The idea is to vent out the negativity that is suppressed within all of us.




The International Women's Day is celebrated every year on 8th March. The idea behind observing International Women's Day is to celebrate the economic, political and social achievements of women from past, present and future. In spite of all the talk of emancipation of women, the prevailing situation indicates that women have a long way to go.

We have destroyed the forest cover on earth in the name of development and exploited the natural resources. The World Forestry Day is observed on 21st March to spread awareness among people regarding the importance of forests in helping to maintain the ecological balance. Due to various factors such as changing seasonal patterns, climate change, deforestation, over irrigation, abuse and misuse of water, pollution of water reservoirs, depletion of ground water resources etc. we are facing the problem of water scarcity which is worsening day by day. World water Day is observed on 22nd March to spread awareness about the importance of water conservation among people across the world.

Christians celebrated Good Friday in which almost always falls in March to commemorate the crucifixion of Lord Jesus Christ who gave a message of peace, love and forgiveness two thousand years ago.

We human beings are said to be social animals. Yet, every now and then we come across news of different types of anti-social acts committed by human beings, which lead us to doubt whether we are really human and social. We call ourselves citizens of a free country and we find ourselves bound by the will and decisions of others and we also find ourselves imposing our opinions and decisions on others. We call ourselves citizens of a secular country and show intolerance to others whom we discriminate on the basis of their caste, colour, creed, gender or social status. We need the services of many people for our survival but it is a shame that we do not want to recognize their contribution to the society. We have also encroached upon the habitat of other living beings and caused them to become endangered or extinct. We practice or profess different faiths but we neglect the very core of all these faiths – to be humane. It is time to get rid of our silliness and stop being unjust toward fellow human beings and animals. So, let's mar our hypocrisy in March.

***

## ೫. ಮರಳಿ ಯತ್ನವ ಮಾಡು...

– **ಗೋಪಾಲಕೃಷ್ಣ ಐ,**



ಮಂಗಳೂರಿನ ಸಮೀಪದ ಫಜೀರು ನಿವಾಸಿಯಾದ ಬಸವಯ್ಯನ ಕುಟುಂಬ ಅತ್ಯಂತ ಕಡು ಬಡತನ ಹಿನ್ನೆಲೆಯದ್ದು. ಉದ್ಯೋಗ ನಿಮಿತ್ತ ದೂರದ ಗುಲ್ಬರ್ಗಾದ ಊರಿನಿಂದ ಇಲ್ಲಿಗೆ ಬಂದು ನೆಲೆ ನಿಂತವರು. ಇವರ ಸಂಸಾರ ರಥ ನಡೆಯಲು ಕೂಲಿ ಕೆಲಸವೇ ಆಧಾರವಾಗಿತ್ತು. ಇವರಿಗೆ ಕಾವ್ಯ ಮತ್ತು ಭುವನ ಎಂಬ ಇಬ್ಬರು ಮಕ್ಕಳು. ಜೀವನದ ಅನುಭವ ಕಲಿಸಿದಂತೆ, ತನ್ನಂತೆ ನನ್ನ ಮಕ್ಕಳು ಕಷ್ಟಪಡುವುದು ಬೇಡ, ಅವರಿಗೆ ಉತ್ತಮ ಶಿಕ್ಷಣ ಕೊಡಿಸಬೇಕೆಂದು ಆಶಿಸಿದ್ದರು. ಹೊಟ್ಟೆ ಬಟ್ಟೆ ಕಟ್ಟಿ ಮಕ್ಕಳಿಬ್ಬರ ಓದಿಗೆ ಪ್ರೋತ್ಸಾಹ ನೀಡಿದರು. ಅವರ ಮೇಲಿನ ನಂಬಿಕೆಯನ್ನು ಈರ್ವರೂ ಹುಸಿಗೊಳಿಸಲಿಲ್ಲ. ಉತ್ತಮವಾಗಿಯೇ ಕಲಿತು, ಹೆಚ್ಚಿನ ಅಂಕಗಳಿಸಿ, ಉನ್ನತ ದರ್ಜೆಯಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದರು.

ಮಂಗಳೂರು ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯೇ ಕಾವ್ಯ. ಕಲಿಕೆಯಲ್ಲಿ ಎತ್ತಿದ ಕೈ, ವಿಭಾಗದ ಮುಖ್ಯಸ್ಥರಾದ ಜಗದೀಶ ಮಾಸ್ತರರಿಗೂ, ಸಹಪಾಠಿಗಳಿಗೂ ಇವಳನ್ನು ಕಂಡರೆ ಅಚ್ಚುಮೆಚ್ಚು. ಕೌಟುಂಬಿಕ ಸಮಸ್ಯೆಯಿಂದಾಗಿ ಉದ್ಯೋಗ ಪಡೆದುಕೊಳ್ಳಬೇಕೆಂಬ ಆಶಯವೇನೋ ಅವಳಿಗೆ ಇತ್ತು. ಇದೇ ಸಂದರ್ಭದಲ್ಲಿ ದೇಶದ ಪ್ರಖ್ಯಾತ ವಿದ್ಯಾ ಸಂಸ್ಥೆಯೊಂದು ನೇಮಕಾತಿಗಾಗಿ ಈ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿತು. ಪ್ರಾಯಶ: ಈ ಸಂಸ್ಥೆಯ ಮೊತ್ತ ಮೊದಲ ಪ್ರಯತ್ನವಿದು. ಸಂಸ್ಥೆಯ ಸವಿವರವನ್ನೆಲ್ಲಾ ಹೇಳುತ್ತಾ, ಅಂತಿಮ ವರ್ಷದ ಸ್ನಾತಕೋತ್ತರ ಪದವಿ ಪರೀಕ್ಷೆ ಬರೆಯುವವರು ಲಿಖಿತ ಪರೀಕ್ಷೆಯಲ್ಲಿ ಪಾಲ್ಗೊಳ್ಳಬಹುದೆಂದು ತಿಳಿಸಿದರು. ಹಲವು ವಿಷಯಗಳಲ್ಲಿ ಒಂದಷ್ಟು ವಿದ್ಯಾರ್ಥಿಗಳು ಲಿಖಿತ ಪರೀಕ್ಷೆ ಬರೆದಿದ್ದರು. ಭೂಗೋಳಶಾಸ್ತ್ರದಲ್ಲಿ ಪರೀಕ್ಷೆ ಬರೆದ ಹಲವು ವಿದ್ಯಾರ್ಥಿಗಳಲ್ಲಿ ಮುಂದಿನ ಹಂತಕ್ಕೆ ಆಯ್ಕೆಯಾಗಿದ್ದು ಒಬ್ಬಳೇ, ಅವಳೇ ಕಾವ್ಯ. ಮುಂದಿನ ಹಲವು ಹಂತಗಳಾಗಿ ವಿಷಯ ತಜ್ಞರೊಂದಿಗೆ ಮೌಖಿಕ ಸಂದರ್ಶನವೂ ನಡೆಯಿತು. ಇದರಲ್ಲೂ ತೇರ್ಗಡೆಯಾದಳು. ಇನ್ನೇನೂ ನೇಮಕಾತಿ ಆದೇಶ ನೀಡಬೇಕು, ಅದಕ್ಕೂ ಮೊದಲು ದಾಖಲಾತಿಗಳನ್ನು ಪರಿಶೀಲಿಸಿದಾಗಲೇ ಕಂಡು ಬಂದಿದ್ದು ಅವಳ ಕರಾಮತ್ತು.



ಕಾವ್ಯಳ ದಾಖಲಾತಿ ಪರಿಶೀಲಿಸಿದಾಗ ಡಿಗ್ರಿ ತನಕದ ಸರ್ಟಿಫಿಕೇಟ್ ಎಲ್ಲವೂ ಸಮರ್ಪಕವಾಗಿತ್ತು. ಸ್ನಾತಕೋತ್ತರ ಪದವಿಯ ಬಗ್ಗೆ ಕೇಳಿದಾಗ ಗೊತ್ತಾಗಿದ್ದು ಅವಳು ಮೊದಲ ವರ್ಷದ ವಿದ್ಯಾರ್ಥಿನಿಯೆಂದು. ಇವಳು ಆಗ ತಾನೆ ಮೊದಲ ವರ್ಷದ ಡಿಗ್ರಿಗೆ ಸೇರಿಕೊಂಡಿದ್ದಳಷ್ಟೇ!. ಇವಳನ್ನು ವಿಚಾರಿಸಿದಾಗ, ನನಗೆ ಅಂತಿಮ ವರ್ಷದ ವಿದ್ಯಾರ್ಥಿಗಳು ಮಾತ್ರವೇ ಅರ್ಹರು ಎಂದು ಗೊತ್ತೇ ಇರಲಿಲ್ಲ ಎಂಬ ಹೇಳಿಕೆ ನೀಡಿದಳು. ತನ್ನ ಮನವಿಯನ್ನು ಮುಂದುವರಿಸುತ್ತಾ, ನನಗೆ ಕೆಲಸ ಬೇಕು. ನಾನು ತಕ್ಷಣವೇ ಈ ವಿದ್ಯಾ ಸಂಸ್ಥೆಗೆ ಬಂದು ಉದ್ಯೋಗಕ್ಕೆ ಸೇರುತ್ತೇನೆ.

ಸಮಸ್ಯೆಗಳು ಉದ್ಭವವಾಗುವುದೇ ಹಾಗೆ!. ಅಭ್ಯರ್ಥಿ ಎಲ್ಲಾ ಹಂತದಲ್ಲೂ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದರೂ, ಮೂಲ ಅರ್ಹತೆಯೇ ಇಲ್ಲದೇ ಸಂಸ್ಥೆಗೆ ಸೇರಿಸಿಕೊಳ್ಳುವುದು ಹೇಗೆ?. ಉದ್ಯೋಗ ಲಭಿಸಿದೆ ಎಂದು ತನ್ನ ಶಿಕ್ಷಣವನ್ನು ಅರ್ಧದಲ್ಲಿಯೇ ಕೈದು ಮಾಡುವುದು ಸರಿಯೇ? ಅರ್ಹರಲ್ಲದಿದ್ದರೂ ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಸೂಕ್ತವೇ?. ಅತ್ಯಂತ ನಾಜೂಕಿನಿಂದ ಪರಿಹರಿಸಿಕೊಳ್ಳಬೇಕಾಗಿತ್ತು. ಇದನ್ನು ಕೂಡಲೇ ಬಗೆಹರಿಸಿಕೊಳ್ಳಲೇಬೇಕು. ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯತೆಯೂ ಇತ್ತು. ಸಮಸ್ಯೆಯನ್ನು ಸಂಸ್ಥೆಯ ವಿವಿಧ ಹಂತದಲ್ಲೂ ಚರ್ಚೆಯೂ ಆಯಿತು. ಕಾವ್ಯಳೊಂದಿಗೆ ವಿವರವಾಗಿ ಚರ್ಚಿಸಿದಾಗ ಕಂಡು ಬಂದ ಅಂಶವೆಂದರೆ, ಒಳ್ಳೆಯ ಉದ್ದೇಶವನ್ನೇ ಇಟ್ಟುಕೊಂಡಿದ್ದಳು ಎಂದು ಸಂಸ್ಥೆಗೆ ಮನವರಿಕೆಯಾಗಿತ್ತು. ಎಲ್ಲರೂ ಒಕ್ಕೊರಲಿನಿಂದ ಮುಂದಿನ ವರ್ಷ ನಡೆಯುವ ನೇಮಕಾತಿ ಪ್ರಕ್ರಿಯಯಲ್ಲಿ ಭಾಗವಹಿಸುವಂತ ಅವಳನ್ನು ಮನವೊಲಿಸಿ ವಾಪಾಸು ಕಳುಹಿಸಲಾಯಿತು.

ಇವಳು ಸುಮಾರು ಒಂದು ವರ್ಷ ಅತ್ಯಂತ ಸಹನೆಯಿಂದ ಕಾಯುತ್ತಾಳೆ. ಮತ್ತೊಮ್ಮೆ ತನಗೆ ಸಿಕ್ಕ ಸುವರ್ಣ ಅವಕಾಶವೆಂದು ತಿಳಿಯುತ್ತಾಳೆ. "ಮರಳಿ ಪ್ರಯತ್ನ ಮಾಡು" ಎಂಬ ದಾರ್ಶನಿಕ ಉಕ್ತಿಯಂತೆ ಮರುವರ್ಷ ನೇಮಕಾತಿ ಆಂದೋಲನದಲ್ಲಿ ಭಾಗವಹಿಸುತ್ತಾಳೆ. ತನ್ನ ವಿಷಯದಲ್ಲಿ ಲಿಖಿತ ಪರೀಕ್ಷೆ ಬರೆಯುತ್ತಾಳೆ. ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಗುತ್ತಾಳೆ. ಮಾನವ ಸಂಪನ್ಮೂಲ ಇಲಾಖೆಯ ವಿವಿಧ ಅರ್ಹತಾ ಹಂತಗಳಲ್ಲೂ ಯಶಸ್ವಿಯಾಗುತ್ತಾಳೆ. ಈ ಸಾಧನೆಗೆ ಅರ್ಹವಾಗಿಯೇ ಉದ್ಯೋಗ ಲಭಿಸುತ್ತದೆ.

ಬಹುಶ: ಇಂತಹ ಸಮಸ್ಯೆಯಾಗುತ್ತದೆ ಎಂದು ಯಾರು ನಿರೀಕ್ಷಿಸಿರುವುದಿಲ್ಲ. ಹುಡುಗಾಟಿಕೆಯೋ, ಹೀಗೆ ಮಾಡಿದರೆ ಏನಾಗುತ್ತದೆಯೋ ನೋಡೋಣ, ಸವಾಲು ಎದುರಿಸಿಬಿಡೋಣ ಎಂಬ ಹಲವು ತರ್ಕವು ಮನೆ ಮಾಡುತ್ತದೆ. ಒಂದು ಒಳ್ಳೆಯ ಉದ್ದೇಶ ಇಟ್ಟುಕೊಂಡು ಕಾರ್ಯವನ್ನು ಮಾಡಿದಾಗ ಗುರಿ ಸಫಲತೆ ಸಾಧಿಸಬಹುದು ಅಲ್ಲವೇ....!.

***

## ೬. ನಾನೊಬ್ಬ ಮಹಿಳೆ (ಸ್ತ್ರೀ) ಎನ್ನುವುದಕ್ಕೆ ನನಗೆ ಹೆಮ್ಮೆ

**–ಯಮುನಾ ಬೆಸ್ತರ್**

"ಯತ್ರ ನಾರ್ಯಂತು ಪೂಜ್ಯಂತೆ ತತ್ರ ರಮಂತೆ ದೇವತಾ" ಎಲ್ಲಿ ನಾರಿಯನ್ನು ಪೂಜಿಸುತ್ತಾರೋ ಅಲ್ಲಿ ದೇವತೆಗಳು ವಾಸಿಸುತ್ತಾರೆ. ಎಂಬ ಆರ್ಯೋಕ್ತಿಯನ್ನು ಎಲ್ಲರೂ ಕೇಳಿರಬಹುದು. ನಾವೆಲ್ಲಾ ಪ್ರಾಚೀನ ಭಾರತದ ಇತಿಹಾಸದ ಪುಟಗಳನ್ನು ತಿರುವಿದಾಗ ಸ್ತ್ರೀಯರು ಪುರುಷರಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ ಎಂಬ ಅಭಿಪ್ರಾಯಗಳು ಕಂಡು ಬರುತ್ತವೆ. ವೇದಗಳ ಕಾಲದಲ್ಲಿಯೂ ಸ್ತ್ರೀಯರಿಗೆ ಗೌರವಾದರಗಳು ಇದ್ದವು ಎಂದು ಸಮರ್ಥಿಸಲು ಆಗಿನ ಕಾಲದ ಸ್ತ್ರೀಯರಾದ ಲೋಪಮುದ್ರಾ, ಅಪಲಾ, ವಿಶ್ವವರು, ಸುಲಭಾ, ಮೈತ್ರೇಯ, ಗಾರ್ಗಿ ಮುಂತಾದ ಬ್ರಹ್ಮವಾಹಿನಿಯರು ಹಾಗೂ ಉಪಧ್ಯಾಯನಿಯರೂ ಕೂಡಾ ಆಗಿದ್ದರು.



ಹಾಗೆ ನೋಡುವಾಗ ಕೂಡ ತ್ರೇತಾಯುಗದಲ್ಲಿ ರಾಮಾಯಣ, ಮಹಾಭಾರತ ಕಾಲದಲ್ಲಿಯೂ ಸ್ತ್ರೀಯರಿಗೆ ತಮ್ಮದೇ ಆದ ಸ್ವಾತಂತ್ರ್ಯವಿತ್ತು ಎಂದು ಹೇಳಲು ರಾಮಾಯಣದ ಸೀತೆ, ಮಹಾಭಾರತದ ದ್ರೌಪದಿಯನ್ನು ನಿದರ್ಶನ ಕೊಡಬಹುದು. ಆದರೆ ಈವೆಲ್ಲಾದರದ ಬೆಳವಣಿಗೆಯಲ್ಲಿಯೇ ನ ಸ್ತ್ರೀ ಸ್ವಾತಂತ್ರ್ಯ ಅರ್ಹತಿ ಎಂದು ಸ್ತ್ರೀಯು ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಪತ್ನಿ, ಮುಪ್ಪಿನಲ್ಲಿ ಮಕ್ಕಳ ಪೋಷಣೇಯಲ್ಲಿರಬೇಕು. ಅವಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲ. ಅವಳಿಗೆ ತನ್ನದೇ ಆದ ಸ್ವಾತಂತ್ರ್ಯವಾದರೂ ಏಕೆ? ಎಂಬುದು ಕೊಡ ಜೊತೆ ಜೊತೆಯಾಗಿ ಬೆಳೆದು ಬಂದಿತು. ಯಾರಿಂದ ಹೀಗೆ ಆಯಿತು ಎಂದು ಪ್ರಶ್ನಿಸಲು ಸಾಧ್ಯವಾಗದ ಮಟ್ಟಿಗೆ ಅವಳಿಗೆ ಸ್ವಾತಂತ್ರ್ಯ, ಆಧಿಕಾರ, ಶಿಕ್ಷಣ ದೊರಕಿಸದೆ ಅವಳನ್ನು ಮಾನಸಿಕವಾಗಿ ಹಿಂಸೆಗೆ ಒಳಪಡಿಸದ ಕಾಲವೂ ಬಂದಿತ್ತು. ಒಂದು ಕಾಲದಲ್ಲಿ ಸ್ತ್ರೀತನ ಸ್ಥಾನವನ್ನು ಉನ್ನತ ಮಟ್ಟಕ್ಕೆ ಬಂದಿದ್ದು, ತದನಂತರದಲ್ಲಿ ಏಕೆ ಸ್ತ್ರೀತನವು ಕ್ಷೀಣಿಸಿತ್ತು. ಇದಕ್ಕೆ ಕಾರಣವಾದರೂ ಏನು? ಸ್ತ್ರೀ ಪ್ರಬಲಳೋ ಅಬಲಳೋ ಎಂಬುದಕ್ಕೆ ನನ್ನದೆ ಆದ ಕೆಲವೊಂದು ಅಭಿಪ್ರಾಯಗಳನ್ನು ತಮ್ಮುಂದೆ ಬಿತ್ತರಿಸಲು ಬಯಸುತ್ತೇನೆ.

ಮಹಿಳಾ ಎಂಬ ಪದವು ಮಹಿಲಾ ಎಂಬ ಸಂಸ್ಕೃತ ಪದದಿಂದ ಬಂದಿದೆ. ಇಲ್ಲಿ "ಮಹಿ" ಎಂದರೆ ಭೂಮಿ. "ಲಾ" ಎಂದರೆ ಪಾಲಿಸು. ನಮ್ಮನ್ನು ಯಾರು ಲಾಲನೆ ಪಾಲನೆ ಮಾಡುತ್ತಾರೋ ಅವರನ್ನು ತಾಯಿ ಎನ್ನುತ್ತೇವೆ. ಈ ದಿಸೆಯಲ್ಲಿ ಭೂಮಿಯು ಕೂಡ ಒಂದು ಹೆಣ್ಣು ಅವಳನ್ನು ನಾವು ಭೂತಾಯಿ ಎಂದು ಕರೆಯುತ್ತೇವೆ. ಇತರೆ ದೇವರುಗಳಿಗೆ ಹೋಲಿಸಿದಾಗ, ಅಗ್ನಿದೇವ, ಸೂರ್ಯದೇವ, ವಾಯುದೇವ, ಮಳೆದೇವ ಎಂದೆಲ್ಲಾ ಗುರುತಿಸುತ್ತೇವೆ. ಹಾಗಾದರೆ ಯಾಕೆ ಇವರಿಗೂ ಸ್ತ್ರೀ ನಾಮದೊಂದಿಗೆ ಅಂದರೆ, ಮಳೆದೇವತೆ, ಸೂರ್ಯದೇವತೆ, ಅಗ್ನಿದೇವತೆ, ಎಂದು ಏಕೆ ಕರೆಯಬಾರದು. ಹಾಗೆಂದು ಕರೆಯಲು ಯತ್ನಿಸದರೂ ನಮ್ಮಿಂದ ಆಗದೂ, ಏಕೆಂದರೆ ತಾಯಿಗೆ ಇದ್ದಷ್ಟು ಸಹನಶಕ್ತಿ ಮತ್ತಾರಿಗೂ ಇರುವುದಿಲ್ಲ. ಆ ಕಾರಣಕ್ಕೆ ಭೂಮಿಯನ್ನು ನಾವು ಭೂತಾಯಿ, ಭೂಮಾತೆ ಎಂದು ಕರೆಯುತ್ತೇವೆ. ನಾಲ್ಕು ಕಾಳು ಬಿತ್ತಿ, ನಾಲ್ಕು ಚೀಲ ತೆಗದುಕೊಳ್ಳುತ್ತೇವೆ, ಪ್ರತ್ಯುಪಕಾರವನ್ನು ಬಯಸದ ಜೀವಿ ಹಾಗೆಯೇ ತನ್ನ ಕುಟುಂಬದ ಸರ್ವಸ್ವಕ್ಕಾಗಿ ತನ್ನ ಜೀವನವನ್ನೇ ಮುಡುಪಾಗಿಯಿಟ್ಟು ಕಣ್ಣಿನ ರೆಪ್ಪೆಯಂತೆ ಕಾಪಾಡುತ್ತಾಳೆ.

ಪುರಾಣ ಪುಣ್ಯ ಕಥೆಗಳನ್ನು ತಿರುವಿಹಾಕುವಾಗ ದೇವಾನು ದೇವರಲ್ಲಿ ಹಿರಿಯ ದೇವರು ಎಂದಾಗ ನಾವೆಲ್ಲಾ ಪರಮೇಶ್ವರ ಎನ್ನುತ್ತೇವೆ. ಈ ವಿಚಾರವಾಗಿ ಅನುಭವ ಮಂಟಪದಲ್ಲಿ ಅಕ್ಕಮಹಾದೇವಿಗೂ ಅಲ್ಲಮ ಪ್ರಭುವಿಗೂ ವಾಗ್ವಾದ ನಡೆದಾಗ ತಾಯಿ ಅಕ್ಕಮಹಾದೇವಿ ಎಲ್ಲಕ್ಕಿಂತಲೂ ಸ್ತ್ರೀಯೇ ಹೆಚ್ಚಿನವಳು ಎಂಬುದನ್ನು ತನ್ನ ವಚನದಲ್ಲಿ ನಿರ್ದೇಶಿಸಿದ್ದಾಳೆ.

ತಾ ಮಾಡಿದ ಹೆಣ್ಣು ತನ್ನ ತಲೆಯನ್ನೇರಿತ್ತು  
ತಾ ಮಾಡಿದ ಹೆಣ್ಣು ತನ್ನ ತೊಡೆಯನ್ನೇರಿತ್ತು  
ತಾ ಮಾಡಿದ ಹೆಣ್ಣು ತನ್ನ ನಾಲಿಗೆಯನ್ನೇರಿತ್ತು  
ಇದು ಕಾರಣ ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ  
ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ.

ಸಕಲ ಜೀವರಾಶಿಗಳ ಸೃಷ್ಟಿಕರ್ತನೇ ಪರಮಾತ್ಮ ಆ ಪರಮಾತ್ಮನೇ ತಾನೇ ಸೃಷ್ಟಿಸಿದ ಗಂಗೆಯನ್ನು ತನ್ನ ತಲೆಯ ಮೇಲಿರಿಸಿಕೊಂಡು ಸ್ತ್ರೀ ನನಗಿಂತಲೂ ಹೆಚ್ಚು ಎಂಬುದನ್ನು ಸಮರ್ಥಿಸಿದ್ದಾನೆ. ಹಾಗೆಯೇ ಪ್ರತಿಯೊಬ್ಬ ಪುರುಷನ ವ್ಯಕ್ತಿತ್ವ ವಿಕಾಸದ ಅಥವಾ ಯಶಸ್ಸಿನ ಹಿಂದೆ ಒಂದು ಹೆಣ್ಣಿನ ಶ್ರಮ ಇದ್ದೇ ಇದೆ. ಇದಕ್ಕೆ ನಿದರ್ಶನ ನೀಡಲು ಇಚ್ಚಿಸುತ್ತೇನೆ. ಒಬ್ಬ ಕುರಿ ಕಾಯುವ ಕುರುಬ ಕಾಳಿದಾಸದಾಗಿ ಪರಿವರ್ತನೆ ಹೊಂದಬೇಕಾದರೆ ಅವನ ಪತ್ನಿಯೇ ಕಾರಣವಾಗುತ್ತಾಳೆ. ಇನ್ನೂ ರಾಮನು ವನವಾಸಕ್ಕೆ ಸಿದ್ಧನಾದಗ ತಾಯಿ ಸೀತೆ ಹೋಗಲು ಮುಂದಾದಗ, ರಾಮ ಹೇಳುತ್ತಾನೆ, ನಾ ಹೋಗುತ್ತಿರುವುದು ಕಾಡಡವಿಯಲ್ಲಿ ಕ್ರೂರ ಮೃಗಗಳ ಜೊತೆಯಲ್ಲಿ, ಮುಳ್ಳು ಕಂಟೆಗಳ ಹಾದಿಯಲ್ಲಿ ಅಂತಹದಲ್ಲಿ ನೀನು ಬರುವುದು ಬೇಡ ಎಂದಾಗ ಸೀತೆ ಹೇಳುತ್ತಾಳೆ, ಆರ್ಯಪುತ್ರ ನೀನು ಧನಸ್ಸನ್ನು ಎತ್ತಿದಾಗ ಪುರುಷಸಿಂಹನೆಂದುಕೊಂಡಿದ್ದೆ ಕಾಡಿನಲ್ಲಿ ನನ್ನನ್ನು

ರಕ್ಷಿಸಲಾರದಷ್ಟು ಅಸಮರ್ಥನೆ ಎಂದು ಹೇಳುತಾ ನಾ ನಿಮ್ಮ ಜೊತೆಗಿದ್ದರೆ ನೀವಿಟ್ಟ ಗುರಿ ಎಂದಿಗೂ ತಪ್ಪುವುದಿಲ್ಲ. ನಿಮ್ಮ ಪ್ರತಿಯೊಂದು ಬಾಣಗಳಿಗೆ ನಾನು ಚೇತನಾಶಕ್ತಿ ಎಂದು ರಾಮನೊಂದಿಗೆ ಕಾಡಿನತ್ತ ಹೆಜ್ಜೆಯಿಟ್ಟಳು ಸೀತಾ ಮಾತೆ. ಇಂದಿಗೂ ಸ್ತ್ರೀ ತನ್ನ ಜೀವನವನ್ನು ಕುಟುಂಬಕ್ಕಾಗಿಯೇ ಮುಡುಪಾಗಿಟ್ಟಿದ್ದಾಳೆ.



ವೇದಗಳ ಕಾಲದಲ್ಲೂ ಸ್ತ್ರೀಯರಿಗೆ ಸಮಾನ ಅವಕಾಶಗಳು ಇದ್ದವು ಗಂಡು ಮಕ್ಕಳಂತೆ ಸ್ತ್ರೀಯರಿಗೂ ಉಪನಯನ ಮಾಡುತ್ತಿದ್ದರು. ಸಂಸ್ಕೃತ ಅಭ್ಯಾಸಕ್ಕೆ ಅವಕಾಶವಿತ್ತು. ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ ಎನ್ನುವುದನ್ನು ಕಾಣುತ್ತೇವ. ಇಲ್ಲಿ ಹೆಣ್ಣಿಗೆ ಮೊದಲ ಸ್ಥಾನ ನೀಡಲಾಗಿದೆ. ಇದು ಸರ್ವಕಾಲಕ್ಕೂ ಸತ್ಯ.. ಏಕೆಂದರೆ ತಾಯಿ ನೀಡುವ ನೈತಿಕ ಶಿಕ್ಷಣವೇ ಮಗುವಿನ ಮುಂದಿನ ಜೀವನದ ಯಶಸ್ವಿಗೆ ಕಾರಣವಾಗುತ್ತದೆ.

ಶಿವಾಜಿ ತಾಯಿ ಜೀಜಾಬಾಯಿ ಪಾಠ, ಬಬ್ರುವಾಹನಿಗೆ ಅವನ ದೊಡ್ಡಮ್ಮ ಊಲೂಚಿ ನೀಡಿ ಸಕಲ ಯುದ್ಧ ಪಾರಂಗತನನ್ನಾಗಿ ಬೆಳೆಸಿದ ಪರಿ, ತಾಯಿಂದ ಕಲಿತ ಅಕ್ಕಮಹಾದೇವಿ ಧಾರ್ಮಿಕ ಶ್ರದ್ಧೆ, ಗರ್ಭವತಿಯಾಗಿದ್ದಾಗ ತಾಯಿ ಪುತಲಿಬಾಯಿ ಕಠಿಣ ಉಪವಾಸ ವ್ರತ (ಸೂರ್ಯದರ್ಶನದ ನಂತರವೇ ಪ್ರಸಾದ ಸೇವನೆ, ೨,೩,ದಿನ ಸೂರ್ಯ ಕಾಣದೇ ಹೋದರೆ ೨,೩ ದಿನ ಪುತಲಿಬಾಯಿ ಉಪವಾಸ ಇರುತ್ತಿದ್ದರು.) ಹಾಗಾಗಿ ಮಹಾತ್ಮ ಗಾಂಧೀಜಿ ೨೧ ದಿನಗಳ ಕಠಿಣ ಉಪವಾಸ ಸತ್ಯಾಗ್ರಹ ಮಾಡುವುದಕ್ಕೆ ಸಾಧ್ಯವಾಯಿತೆನ್ನಬಹುದು. ಇದರಿಂದ ಸ್ತ್ರೀ ತನದ ಶಕ್ತಿಯನ್ನು ಅರಿಯಬಹುದು.

ಇಂದಿನ ಸ್ಥಿತಿಯನ್ನು ಅವಲೋಕಿಸಿದಾಗ, ಒಂದು ಹೆಣ್ಣು, ಹೆಣ್ಣು ಮಗುವಿಗೆ ಜನ್ಮವಿತ್ತಾಗ ಅಯ್ಯೋ, ಗಂಡು ಹೆತ್ತರೆ ಭಲೆ ಎನ್ನು ನಮ್ಮ ಸಮಾಜ ಅದೇ ಒಂದು ಎಮ್ಮೆ ಅಥವಾ ಆಕಳು ಕೋಣ (ಹೋರಿ) ಹಾಕಿದರೆ ಅಯ್ಯೋ ಎಂದು ಹೆಣ್ಣು ಕರು ಹಾಕಿದರೆ ಭಲೆ ಎಂದು ಉದ್ಘರಿಸುತ್ತಾರೆ. ಅಂದರೆ ಮನೆಯಲ್ಲಿರುವ ಒಂದು ಪಶುವಿಗೆ ಇದ್ದ ಬೆಲೆ ಸ್ತ್ರೀಗೆ ಇಲ್ಲವಲ್ಲ. ಗಂಡು ಒಂದು ಮನೆಯ ಬೆಳಕಾಗಿದ್ದರೆ, ಹೆಣ್ಣು ಎರಡು ಮನೆ ಬೆಳಗುವ ದೀಪ ಎಂಬುದನ್ನು ಈ ಸಮಾಜ ಏಕೆ ಅರ್ಥೈಸಿಕೊಂಡಿಲ್ಲ. ಹಿಂದಿನ ಕಾಲದಲ್ಲಿ ಗಂಡು ಹೆಣ್ಣಿಗೆ ತೆರವು ಅಥವಾ ಗೌರವ ಕೊಡುಗೆ ಕೊಟ್ಟು ತನ್ನ

ಮನೆ ಬೆಳಗುವ ಜ್ಯೋತಿಎಂದು ಪಡೆಯುತ್ತಿದ್ದ. ಆದರೆ ಇಂದು ಇದಕ್ಕೆ ತದ್ವಿರುದ್ಧವೇ ಹಾಗಿದೆ. ಉಮಾಶಂಕರ್ ಪೆರಿಯವರ ಮಾತಿನ ನೆನಪು, ಮನುಕುಲದ ಉಳಿವು ಇರುವುದೇ ಸ್ತ್ರೀ ಕುಲದಿಂದ. ಮುಂದೊಂದು ಕಾಲದಲ್ಲಿ ಪುರುಷನಿಲ್ಲದೇ ಸ್ತ್ರೀ ಕುಲವೊಂದೆ ಇದ್ದಿತ್ತಾದರೂ ಆಶ್ಚರಿಯ ಸಂಗತಿಯಿಲ್ಲ. ಇಂದು ವೈಜ್ಞಾನಿಕ ಕಾಲದಲ್ಲಿ ಏನೂ ಮಾಡಲು ಸಾಧ್ಯವಿಲ್ಲ ಹೇಳಿ, ಎಲ್ಲವೂ ನಮ್ಮ ಕೈಯಲ್ಲಿ ಅಂಗೈಯಲ್ಲಿಯೇ ನಡೆಯುತ್ತಿದೆ. ಒಂದು ವೀರ್ಯಾಣು ವಿಂದ ಎಷ್ಟೋ ಸಂತತಿ ಮಾಡಬಹುದಾದರೆ, ಇಂತಹದೊಂದು ನಡೆಯುವುದಕ್ಕೆ ಇನ್ನು ಹೆಚ್ಚು ಕಾಲ ಬೇಕಾಗಿಲ್ಲವೆನಿಸುತ್ತೆ ನನಗೆ.

ಇಂದು ಸ್ತ್ರೀ ಅಬಲೆ ಅಲ್ಲ ಸಬಲೆ ಎನ್ನುವುದಕ್ಕೆ ಇನ್ನೂ ಸಾಕಷ್ಟು ನಿದರ್ಶನಗಳು ನಮ್ಮ ಕಣ್ಮಂದೆ ನಿತ್ಯವೂ ನೋಡುತ್ತಿರುತ್ತೇವೆ. ನೊಬಲ್ ಶಾಂತಿ ಪ್ರಶಸ್ತಿ ಪಡೆದ – ಇರಾನಿನ ಶಿರೀನ್, ಇವರು ಹನ್ನೊಂದನೆ ಮಹಿಳೆಯಾಗಿದ್ದಾರೆ. (ಮಾನವ ಹಕ್ಕು ಮತ್ತು ಮಹಿಳೆ ಹಕ್ಕುಗಳಿಗಾಗಿ ಶ್ರಮಿಸಿರುತ್ತಾರೆ). ಭಾರತ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮ ಛಾಪು ಮೂಡಿಸಿದ್ದಾರೆ. ಚಿರತೆಯ ಓಟ – ಪಿ.ಟಿ.ಉಷಾ, ಹದಿನೈದು ವರ್ಷ ಸತತವಾಗಿ ದೇಶದ ಆಡಳಿತ ಚುಕ್ಕಾಣಿಯ ಕಾರ್ಯನಿರ್ವಹಿಸಿದ ಪ್ರದಾನಿ ಇಂದಿರಾ, ಇತಿಹಾಸ ಪುಟಗಳಲ್ಲಿಯೇ ಮಿಂಚಿದ ರಾಣಿ ಚನ್ನಮ್ಮ & ಲಕ್ಮೀಬಾಯಿ ಇನ್ನು ಅದೆಷ್ಟೂ ಮಹಿಳೆಯರು ದಿಟ್ಟತನದಿಂದ ಜೀವನ ನಡೆಸುವುದರ ಮೂಲಕ ಮಹಿಳೆಯರ ಸ್ಥಾನ ಬೆಳಗಿದರು. ನಾನು ಯಾರಿಗೂ ಕಡಿಮೆ ಇಲ್ಲವೆಂದು ಗಗನಯಾತ್ರಿ ಮಾಡಿದ ಕಲ್ಪನಾಚಾವ್ಲಾ, ನಿಷ್ಠವಂತ ಪೋಲಿಸ್ ಅಧಿಕಾರಿಯಾದ ಕಿರಣ್ ಬೇಡಿ, ಆಯ್.ಪಿ.ಎಸ್.& ಆಯ್.ಎ.ಎಸ್., ರಾಷ್ಟ್ರಪತಿ ಪ್ರತಿಭಾ ಪಾಟೇಲ್, ಬಾಕ್ಸಿಂಗ್ ಪಟು ಮೇರಿ ಕೋಮ್, ಇನ್ನಿತರ ಮಹಿಳೆಯರು ಉನ್ನತ ಶ್ರೇಣಿಯ ಅಧಿಕಾರಿಗಳಾಗಿ ಸಮಾಜ ಸೇವೆಯಲ್ಲಿ ತೊಡಿದವರನ್ನು ಈಗಲೂ ನೋಡುತ್ತೇವೆ. ಅಷ್ಟೇ ಯಾಕೆ ತುಂಬಾನೇ ಕ್ಲಿಷ್ಟಕರ ಹುದ್ದೆಗಳಲ್ಲಿ ಮಹಿಳೆಯರು ಭಾಗವಹಿಸುತ್ತಿರುವುದು. ಈಗತ್ತಾನೆ ಮುಗಿದ ಪ್ರೋ. ಕಬ್ಬಡಿ ಲೀಗ್ ನಲ್ಲಿ ಅಂಪೆರ್ ಹುದ್ದೆಗೆ ಭಾಗವಹಿಸಿದವರಲ್ಲಿ ಒಟ್ಟು ೧೫ ವಿವಿಧ ಹುದ್ದೆಗಳಲ್ಲಿ ಭಾಗವಹಿಸಿದ ಮಹಿಳೆರಲ್ಲಿ ಎಂಟು ಜನ ಮಹಿಳೆಯರೆ ನೇಮಕವಾಗಿರುವುದು ವಿಶೇಷ ಅಲ್ವೆ. ಪುರಷರಿಗೆ ಸರಿಸಾಟಿಯಾಗಿ ಮಹಿಳೆ ಕಾರ್ಯನಿವರ್ಹಿಸುತ್ತಿರುವುದನ್ನು ನೋಡಿದಾಗ ಹೆಣ್ಣು ಅಬಲೆಯಲ್ಲ, ಅವಳು ಸಬಲೆ ಎನ್ನುವುದಕ್ಕೆ ಇವರೆಲ್ಲಾ ಜ್ವಲಂತ ಉದಾಹರಣೆಯಾಗಿದ್ದಾರೆ. ಆದರೆ ಇಂದು ಕಮುಕರು, ಪುಡಿಪೋಕರು, ಸ್ತ್ರೀ ಸ್ವಾತಂತ್ರ್ಯವನ್ನು ಕಬಳಿಸುತ್ತಿರುವುದು, ಅವಳ ವೃತ್ತಿಯಲ್ಲಿ ಅವಳನ್ನು ಅವಚ್ಚ ಹೀನಾಯಾ ಪದಗಳಿಂದ ಶೋಷಿಸುವುದು, ಅತ್ಯಾಚಾರ ಲೈಂಗಿಕ ಕಿರುಕುಳ ಹೀಗೆ ನಿತ್ಯವೂ ಸಾಗಿದೆ. ಬನ್ನಿ, ನಾವು ನೀವು ಸೇರಿ ಇದನ್ನು ಸದೆ ಬಡಿಯೋಣ. ಈಗ ನೀವೆ ಯೋಚಿಸಿ ಮಹಿಳೆಯರಿಗೆ ಹೆಚ್ಚು ಹೆಚ್ಚು ಅವಕಾಶಗಳು (೩೦% ಅಷ್ಟೇ ಅಲ್ಲ) ಎನ್ನುವುದಕ್ಕಿಂತ ಎಲ್ಲಾರಿಗೂ ಸರಿಸಮಾನವಾದ ಅವಕಾಶಗಳು ಇರಬೇಕು. ನಾನೊಬ್ಬ ಮಹಿಳೆ ಎನ್ನುವುದಕ್ಕೆ ನನಗೆ ಹೆಮ್ಮ ಆಗುತ್ತಿದೆ.


***

## ೭. ಬಂಗಾರದ ಕೂದಲು V/S ಕೈ ಗಡಿಯಾರ

– **ಗುಂಡಪ್ಪ ಕಾಟೇಕರ**

ನಾನು ಪಿ.ಯು.ಸಿಯಲ್ಲಿ ಓದಿದ ಮತ್ತು ನನಗೆ ಇಷ್ಟವಾದ **"ದಿ ಗೋಲ್ಡನ್ ಹೇರ್"** ಎಂಬ ಒಂದು ಕತೆಯನ್ನು ಇಲ್ಲಿ ಬರೆಯುತ್ತಿದ್ದೇನೆ. ಇದು ನಾನು ಓದಿದ್ದು ಇಂಗ್ಲೀಷ ಪಠ್ಯಪುಸ್ತಕದಲ್ಲಿ. ಇದು ಯಾರು ಬರೆದದ್ದು ಎಂದು ನನಗೆ ನೆನಪಿಗೆ ಬರುತ್ತಿಲ್ಲ. ಈ ಕತೆಯನ್ನು ನಾನು ಇದುವರೆಗೂ ಕೂಡ ಸಾಕಷ್ಟು ಕಡೆ ಹುಡುಕಾಡಿದ್ದೇನೆ. ಆದರೆ ಅದು ನನಗೆ ದೊರೆತಿಲ್ಲ. ಇದು ದೊರೆಯದಿದ್ದರೂ ಕೂಡ ನನಗೆ ಆ ಒಂದು ಕತೆಯ ಇಡೀ ಸಾರಾಂಶ ತಲೆಯಲ್ಲಿ ಉಳಿದುಕೊಂಡಿರುವುದರಿಂದ ಅದನ್ನು ಬರೆಯುವ ಪ್ರಯತ್ನವನ್ನು ಮಾಡಿದ್ದೇನೆ.

ಒಂದು ಸಣ್ಣ ಪಟ್ಟಣ ಆ ಪಟ್ಟಣದಲ್ಲಿ ಒಂದು ಕುಟುಂಬ ವಾಸವಾಗಿತ್ತು. ಇವರದು ತೀರಾ ಬಡತನದ ಬದುಕಾಗಿತ್ತು. ಮನೆಯಲ್ಲಿ ಏನೊಂದು ಇರಲಿಲ್ಲ. ಒಂದು ದಿನ ಕೆಲಸ ಮಾಡುವುದು ಮತ್ತು ಅದರಿಂದ ಹೊಟ್ಟೆ ತುಂಬಿಸಿಕೊಳ್ಳುವುದು. ಇಂಥ ಬಡತನದಲ್ಲಿ ಬದುಕು ಸವೆಸುತ್ತಿದ್ದರು ಆ ದಂಪತಿಗಳು. ಮನೆಯಲ್ಲಿ ಬೇರಾರು ಇಲ್ಲ. ಇದ್ದದ್ದು ಇಬ್ಬರೆ. ಅದೇ ತ/ಅನೆ ಮದುವಯಾದ ಹೊಸ ದಾಂಪತ್ಯದ ಬದುಕು ಅವರದಾಗಿತ್ತು. ಅವರಲ್ಲಿ ಯಾವುದೇ ಒಂದು ಒಡವೆ, ಬಂಗಾರ, ಬೆಳ್ಳಿ ಇಂಥ ಬೆಲೆ ಬಾಳುವ ಯಾವ ವಸ್ತುಗಳು ಕೂಡ ಇರಲಿಲ್ಲ. ಆದರೆ ಅವನ ತಂದೆಯಿಂದ



ಬಳುವಳಿಯಾಗಿ ಬಂದ ಒಂದು ಕೈ ಗಡಿಯಾರ ಮಾತ್ರ ಅವನಲ್ಲಿತ್ತು. ಅದು ತುಂಬಾ ಹಳೆಯ ಗಡಿಯಾರವಾಗಿದ್ದರೂ ಕೂಡ ಒಳ್ಳೆಯದಾಗಿತ್ತು. ಆದರೆ ಅದನ್ನು ಕೈಗೆ ಕಟ್ಟಿಕೊಳ್ಳುವ ಹಾಗಿರಲಿಲಲ್ಲ. ಏಕೆಂದರೆ ಅದರ ಪಟ್ಟಿ ಅವನ ತಂದೆ ಇವನಿಗೆ ನೀಡುವುದಕ್ಕಿಂತಲೂ ಪೂರ್ವದಲ್ಲಿಯೇ ಕಿತ್ತು ಹೋಗಿತ್ತು. ಆದರೂ ಕೂಡ ಇವನು ಅದನ್ನು ಒಂದು ಪೆಟ್ಟಿಗೆಯೊಳಗೆ ಇಟ್ಟು ತುಂಬಾ ಜೋಪಾನವಾಗಿ ಕಾಪಾಡಿಕೊಂಡಿದ್ದನು. ಏಕೆಂದರೆ ತಂದೆಯಿಂದ ಬಂದ ಒಂದೇ ಒಂದು ಬೆಲೆ ಬಾಳುವ ವಸ್ತು ಅದಾಗಿತ್ತು.

ಆ ಗಡಿಯಾರವನ್ನು ಅವನು ಪದೇ–ಪದೆ ತೆಗೆದು ಹೆಂಡತಿಗೆ ತೋರಿಸಿ ಖೂಷಿ ಪಡುತ್ತಿದ್ದನು. ಅವಳು ಎಷ್ಟೋ ಸಲ ಹೇಳಿದ್ದಳು ಆದರೆ ಇವನ ಹತ್ತಿರ ಅದಕ್ಕೊಂದು ಪಟ್ಟಿ ಹಾಕಿಸುವಷ್ಟು ಹಣ ಇರದೇ ಇರುವುದರಿಂದ ಸುಮ್ಮನಿದ್ದನು. ಹೀಗೆ ಕಾಲ ಕಳೆಯುತ್ತಿರಲು ಕೆಲವೇ ದಿನಗಳಲ್ಲಿ ಹೊಸ ವರ್ಷ ಬರುತ್ತದೆ ತನ್ನ ಹೆಂಡತಿಗೆ ತಾನು ಏನಾದರೊಂದು ಕಾಣಿಕೆ ಕೊಡಲಿಕ್ಕೂ ಕೂಡ ತನ್ನ ಹತ್ತಿರ ಹಣವಿಲ್ಲವಲ್ಲ ಎಂದು ಈತನು ಮನದಲ್ಲೆ ನೊಂದುಕೊಳ್ಳುತ್ತಾನೆ. ಇನ್ನೇನು ಇಂದು ರಾತ್ರಿ ಹೊಸ ವರ್ಷದಾಚರಣೆ ಮಾಡಬೇಕು. ಆದರೆ ಏನು ಮಾಡುವುದು. ಹೆಂಡತಿಗೆ ಏನೊಂದನ್ನು ನೀಡದೆ ಹೇಗೆ ಎಂದು ವಿಚಾರಿಸುತ್ತಾ ಮಾರುಕಟ್ಟೆಯ ಕಡೆಗೆ ಹೋಗುತ್ತಾನೆ. ತನ್ನ ತಂದೆ ಪ್ರೀತಿಯಿಂದ ನೀಡಿದ ಕೈ ಗಡಿಯಾರವನ್ನು ಮಾರಿ ಹೆಂಡತಿಗೆ ಏನಾದರೊಂದು ಕಾಣೀಕೆಯನ್ನು ನೀಡಬೇಕೆಂದುಕೊಂಡು ಗಡಿಯಾರವನ್ನು ಮಾರಿ ಬಿಡುತ್ತಾನೆ. ಮಾರಿದ ಬಳಿಕ ಏನು ತೆಗೆದುಕೊಳ್ಳುವುದು ಎಂದು ಯೋಚನೆಯಲ್ಲಿ ತೊಡಗುತ್ತಾನೆ.



ಆಗ ಅವನಿಗೆ ನೆನಪಿಗೆ ಬರುತ್ತದೆ. ಇವನ ಹೆಂಡತಿಯ ಕೂದಲು ಬಹಳ ಸುಂದರವಾಗಿದ್ದವು. ಆಕೆಯ ಕೂದಲು ಬಂಗಾರ ವರ್ಣದಿಂದ ಕೂಡಿದು, ನೋಡುವುದಕ್ಕೆ ತುಂಬಾ ಆಕರ್ಷಿಣೀಯವಾಗಿದ್ದವೂ. ಹೀಗಾಗಿ ಅವಳ ಆ ಸುಂದರವಾದ ಕೂದಲನ್ನು ಬಿಗಿದಿಡುವುದಕ್ಕೋಸ್ಕರವಾಗಿ ಒಂದು ಸುಂದರವಾದ ದಂತದ ಕೂದಲ ಕಟ್ಟನ್ನು(ಹೇರ ಪಿನ್ನ) ತೆಗೆದುಕೊಳ್ಳುತ್ತಾನೆ. ಇವನ ಹಾಗೆ ಇವನ ಹೆಂಡತಿಯೂ ಕೂಡ ಮದುವೆಯಾದಾಗಿನಿಂದಲೂ ಕೂಡ ತನ್ನ ಗಂಡನಿಗೆ ಏನೊಂದನ್ನು ಉಡುಗೊರೆಯಾಗಿ ನೀಡಿಲ್ಲ ಇಂದು ಏನಾದರೊಂದು ನೀಡಬೇಕೆಂದು ವಿಚಾರ ಮಾಡಿ ಮಾರುಕಟ್ಟೆಗೆ ಬರುತ್ತಾಳೆ. ಹೇಗೂ ನನ್ನ ಗಂಡನ ಹತ್ತಿರ ಒಂದು ಒಳ್ಳೆಯ ಗಡಿಯಾರ ಇದೆ ಅದಕ್ಕೊಂದು ಸುಂದರವಾದ ಪಟ್ಟಿಯನ್ನು ಅದಕೊಪ್ಪುವಂಗತೆ ತೆಗೆದುಕೊಂಡರೆ, ಅವನ ಕೈಗೊಂದು ಒಳ್ಳೆಯ ಗಡಿಯಾರವಾಗುತ್ತದೆಂದು ಆಲೋಚಿಸಿ ಅದನ್ನು ಖರೀದಿಸಲು ಹೋಗುತ್ತಾಳೆ. ಆದರೆ ಅದಕ್ಕೆ ಬೇಕಾಗುವಷ್ಟು ಹಣ ಇವಳ ಹತ್ತಿರ ಇರುವುದಿಲ್ಲ. ಏನು ಮಾಡುವುದೆಂದು ಆಲೋಚಿಸುತ್ತಿರುವಾಗಲೇ ಅವಳಿಗೊಂದು ಉಪಾಯ ಹೊಳೆಯುತ್ತದೆ. ಹೇಗು ತನಗಿರುವ ಕೂದಲಿಗೆ ಮ/ಅರುಕಟ್ಟೆಯಲ್ಲಿ ಚೆನ್ನಾಗಿ ಬೆಲೆ ಇದೆ ಇದನ್ನು ಮಾರಿದರೆ ತನ್ನ ಗಂಡನಿಗೆ ಒಂದು ಒಳ್ಳೆಯ ಉಡುಗೊರೆ ಕೊಡಬಹುದೆಂದು ನಿರ್ಧರಿಸಿ, ತನ್ನ ಸುಂದರವಾದ ಕೂದಲನ್ನು ಮಾರಿ ಒಂದು ಒಳ್ಳೆಯ ಚೈನನ್ನು ತೆಗೆದುಕೊಂಡು ಮನೆಗೆ ಬರುತ್ತಾಳೆ. ಇತ್ತ ಗಂಡನೂ ಕೂಡ ಹೆಂಡತಿಗೆ ನೀಡಬೇಕೆಂದಿರುವ ಉಡುಗೊರೆಯನ್ನು ತೆಗೆದುಕೊಂಡು ಬರುತ್ತಾನೆ.

ಇಬ್ಬರೂ ಕೂಡ ಒಬ್ಬರು ಇನ್ನೊಬ್ಬರಿಗೆ ಹೇಳಬಾರದು ಒಮ್ಮೆಲೆ ಆಶ್ಚರ್ಯವನ್ನುಂಟು ಮಾಡಬೇಕೆಂದು ಮಧ್ಯರಾತ್ರಿಯ ವರೆಗೂ ಕಾಯುತ್ತಾರೆ. ಮಧ್ಯರಾತ್ರಿಯಾದ ತಕ್ಷಣ ಗಂಡ ತನ್ನ ಹೆಂಡತಯನ್ನು ಕರೆದು ಅವಳ ಹೆರಳನ್ನು ತೆಗೆಯುವಂತೆ ಕೇಳುತ್ತಾನೆ. ಅವನ ಈ ಮಾತನ್ನು ಕೇಳಿ ಅವಳಿಗೆ

ದಿಗ್ಭ್ರಮೆಯಾಗುತ್ತದೆ. ಆದರೂ ಸಾವರಿಸಿಕೊಂಡು ಮೊದಲು ನಿನ್ನ ಗಡಿಯಾರವನ್ನು ಕೊಡು ಆಮೇಲೆ ನಾನು ಹೆರಳನ್ನು ನೀಡುತ್ತೇನೆ ಎಂದು ಹೇಳುತ್ತಾಳೆ. ಅವಳ ಮಾತನ್ನು ಕೇಳಿಸಿಕೊಂಡ ಇವನಿಗೆ ಒಮ್ಮೆಲೆ ಆಕಾಶವೇ ಕಳಚಿದ ಹಾಗಾಗುತ್ತದೆ. ಆದರೂ ಕೂಡ ಸಾವರಿಸಿಕೊಂಡು ಹೆಂಡತಿಗೆ ಹೇಳುತ್ತಾನೆ. ನೋಡು ಮುಂದೆ ನನ್ನಲ್ಲಿ ಹಣ ಬಂದಾಗ ಮತ್ತೆ ಅಂಥ ಗಡಿಯಾರವನ್ನು ಕೊಂಡುಕೊಳ್ಳಬಹುದು, ಹೀಗಾಗಿ ಆ ಗಡಿಯಾರವನ್ನು ಮಾರಿ ನಿನ್ನ ಸುಂದರವಾದ ಕೂದಲನ್ನು ಕಟ್ಟುವುದಕ್ಕಾಗಿ ಒಂದು ಕಟ್ಟನ್ನು ತಂದಿದ್ದೇನೆ ಎಂದು ಹೇಳುತ್ತಾನೆ. ಹೆಂಡತಿ ಮರು ಮಾತನಾಡದೆ ತಾನು ತಂದಿದ್ದ ಚೈನನ್ನು ಅವನ ಮುಂದೆ ಹಿಡಿಯುತ್ತಾಳೆ. ಗಂಡ ಕೇಳುತ್ತಾನೆ ಇದನ್ನು ನೀನು ಹೇಗೆ ತಂದೆ ಎಂದಾಗ ತನ್ನ ತಲೆ ಕೂದಲನ್ನು ಮಾರಿ ತಂದಿದ್ದೇನೆ ಎಂದು ನುಡಿಯುತ್ತಾಳೆ.

ಏನೊಂದು ಮರು ಮಾತನಾಡದೇ ಇಬ್ಬರೂ ಕೂಡ ಅಲ್ಲಿಯೇ ನಿಂತುಕೊಂಡು ಬಿಕ್ಕಿ-ಬಿಕ್ಕಿ ಅಳುತ್ತಾರೆ. ಒಂದು ತಾವು ತಂದ ಉಡುಗೊರೆ ಫಲಪ್ರದಾಯಕವಾಗಲಿಲ್ಲವಲ್ಲ ಎನ್ನುವುದು ಒಂದು ಕಡೆಯಾದರೆ, ಒಂದು ವೇಳೆ ನಾವು ಒಬ್ಬರಿಗೊಬ್ಬರು ಮಾತನಾಡಿಕೊಂಡು ಹೋಗಿದ್ದರೆ ಹೀಗಾಗತಿರಲಿಲ್ಲವಲ್ಲ ಎನ್ನುವುದು ಇನ್ನೊಂದು ಕಡೆ. ಯಾವುದೇ ಒಂದು ಕೆಲಸವನ್ನು ಮಾಡುವುದಕ್ಕಿಂತಲೂ ಮುಂಚೆ ಅದರ ಸಾಧಕ ಬಾಧಕಗಳನ್ನು ಮೊದಲೇ ಚರ್ಚಿಸಿ ಒಂದು ನಿರ್ಧಾರಕ್ಕೆ ಬರುವುದು ಒಳ್ಳೆಯದು. ನಾವು ಯಾವಾಗಲೂ ನಮ್ಮಲ್ಲಿರುವ ಒಳ್ಳೆಯ ವಸ್ತುಗಳ ಕಡೆಗೆ ಗಮನ ನೀಡದೆ ಇನ್ನೊಂದು ಬಾಹ್ಯ ವಸ್ತುವಿನೆಡೆಗೆ ಆಕರ್ಷಿತರಾಗುತ್ತೇವೆ. ಇದರಿಂದ ಸಂತೋಷಕ್ಕಿಂತ ದುಃಖವೇ ಹೇಚ್ಚಾಗುತ್ತದೆ.


***

## ೮. "ಸಾವಿರ ವ್ಯಕ್ತಿಗಳ ಪ್ರಭಾವಕ್ಕಿಂತ ಸ್ವಶಕ್ತಿ ಸಾವಿರ ಪಾಲು ಶಕ್ತಿಯುತವಾದದ್ದು"

**– ರಮೇಶ ಕುಮಾರ.ಡಿ ಬಡಿಗೇರ**

"ಕೊಂಬೆಯ ಮೇಲೆ ಕುಳಿತ ಹಕ್ಕಿ ಅಲುಗಾಡುವ ಕೊಂಬೆ ನೋಡಿ ಭಯಪಡುವುದಿಲ್ಲ
ಕಾರಣ ಅದು ನಂಬಿರುವುದು ಪ್ರಬಲವಾದ ಕೊಂಬೆಯನ್ನಲ್ಲಾ ತನ್ನ ಪುಟ್ಟ ರೆಕ್ಕೆಯನ್ನ"

ಆತ್ಮೀಯರೆ ಮೇಲಿನ ಮಾತನ್ನು ಗಾಂಧೀಜಿಯೋ, ಭಗವಾನ್ ಬುದ್ಧನೋ ಹೇಳಿರಬಹುದೆಂದು ನೀವು ಯೋಚಿಸುತ್ತಿದ್ದಿರಿ, ಆದರೆ ಈ ಮಾತನ್ನು ಇತ್ತೀಚೆಗೆ ನನ್ನ ಶಿಷ್ಯನೊಬ್ಬ ಕಳುಹಿಸಿದ ಮೇಸೆಜು, ಎಲ್ಲಾ ಕಾಲಕ್ಕೂ ಎಲ್ಲಾ ಪ್ರದೇಶಕ್ಕೂ, ಎಲ್ಲಾ ಸಂದರ್ಭಕ್ಕೂ ಅನ್ವಯವಾಗುವಂತಹದಾಗಿದೆ, ಮೇಲಿನ ಸಾಲುಗಳನ್ನು ಎಷ್ಟೇ ಬಾರಿ ಓದಿದರೂ ಅವರಿಗೋದು ನೀತಿ ಇದೆ, ಅದರಲ್ಲೊಂದು ಸಂದೇಶವಿದೆ, ಅದರಲ್ಲೋದು ದೂರದೃಷ್ಠಿ ಇದೆ.




ಯಾವ ವ್ಯಕ್ತಿ ತನ್ ಸಸ್ವಂತ ಬಲವನ್ನು ನಂಬುತ್ತಾನೋ ಅವನೆಂದಿಗೂ ನಿರ್ಭಯಿ. ನಾವು ಮಾಡುವ ಪ್ರತಿಯೊಂದು ಕಾರ್ಯಕ್ಕೂ ಮತ್ತೊಬ್ಬರನ್ನು ಅವಲಂಬಿಸುತ್ತಾ ಅವರ ಪ್ರಭಾವದಿಂದ ಬದುಕುತ್ತಾ ಸಾಗುವ ಅತಂತ್ರ ಓಟಕ್ಕಿಂತ ಸ್ವಾಭಿಮಾನದ ಸ್ವಶಕ್ತಿಯ ಅಂಬೆಗಾಲಿನ ನಡಗೆಯ ನಿರ್ಭಯ ಹಾಗು ನಿರಂತರ, ಇಂತಹ ಸ್ವಶಕ್ತಿ ಸ್ವಸಾಮರ್ಥ್ಯದಿಂದಲೇ ಅನೇಕ ಜನರನ್ನು ಇತಿಹಾಸ ಪುಟದಲ್ಲಿ ಕಂಗೊಳಿಸುತ್ತಿರುವುದು. ನಿಮಗೆ ತಿಳಿದಿರಲಿ ನೆಪೋಲಿಯನ್ ಬೋನಾಪಾರ್ಟೆ, ಟಿಪ್ಪು, ಬಾಬರ್ನಂತಹ ಮಹಾನ್ ನಾಯಕರು ಸಾಧನೆ ಮಾಡಲು ಕಾರಣವಾದದ್ದು ಅವರಲ್ಲಿದ್ದ ಸ್ವಸಾಮರ್ತ್ಯವೇ. ಅವರ ಸ್ವಸಾಮರ್ತ್ಯವು ಅವರನ್ನು ಎತ್ತರಕ್ಕೆ ಕೊಂಡೊಯಿತು, ಆತ್ಮವಿಶ್ವಾಸ ಹೆಚ್ಚಿಸಿತು. ಟಿಪ್ಪು ಸುಲ್ತಾನನು , ತನ್ನ ಸಾಮರ್ತ್ಯಕ್ಕಿಂತ ಬ್ರಿಟಿಷ್ ಸಾಮರ್ತ್ಯ ನೂರಾರು ಪಟ್ಟು ಹೆಚ್ಚಾಗಿದೆ ಎಂದು ತಿಳಿದರೂ ಕೂಡ ಮುಂದೆ ನುಗ್ಗಿದ್ದು ಸ್ವಸಾಮರ್ತ್ಯ ಬಲವನ್ನೆ ನಂಬಿ , ಟಿಪ್ಪು ಯುದ್ಧದಲ್ಲಿ ಮಡಿದರು. ತನ್ನ ಸ್ವಸಾಮರ್ತ್ಯದಿಂದ ಮಾಡಿದ ಹೋರಾಟ ಚರಿತ್ರಾರ್ಹ ಅಂತಹ ಸ್ವಸಾಮರ್ತ್ಯದಿಂದ ಉಂಟಾದ ಆತ್ಮವಿಶ್ವಾಸವೇ ಟಿಪ್ಪುವನ್ನು ಒಬ್ಬ ಹೋರಾಟಗಾರ, ಮುಂದಾಳು ಎಂಬ ಪಟ್ಟ ನೀಡಿತು.

ಬ್ರಿಟಿಷ್ ಸಾಮ್ರಾಜ್ಯದ ವಿಸ್ತರಣೆಗೆ ಮೂಲ ಕಾರಣವಾದ ೧೭೫೭ ಪ್ಲಾಸಿಕದನದ ರೂವಾರಿಯಾದ ರಾಬರ್ಟ್ ಕ್ಲೈವ್‌ನು ಕೇವಲ ತನ್ನ ೩೬೦೦೦ ಸೈನಿಕರೊಂದಿಗೆ ಸ್ವಸಾಮರ್ಥ್ಯದಿಂದ ಹೋರಾಡಿ ೫೦ ಸಾವಿರ ಸೈನಿಕರ ಪಡೆಯನ್ನೊಳಗೊಂಡ ಸಿರಾಜ ಉದ್ ದೌಲನ್ ನನ್ನು ಸೋಲಿಸಿದನು.ಅದಲ್ಲದೇ ಪಾಣಿಪತ್ ಕದನವು ಕೂಡಾ ಒಂದು ಲಕ್ಷ ಸೈನಿಕರ ಬಲದ ಇಬ್ರಾಹಿಂ ಲೂದಿಯನ್ನು ಕೇವಲ ೨೫ ಸಾವಿರ ಸೈನಿಕರ ಬಲದ ಬಾಬರ್ ನೇತೃತ್ವದ ಸೇನಾಪಡೆಯು ಸೋಲಿಸಿದ್ದು ಮೊಗಲ್ ಸಾಮ್ರಾಜ್ಯ ಸ್ಥಾಪಿಸಿದ್ದು ಬಾಬರನಲ್ಲಿದ್ದ ಸ್ವಸಾರ್ಥ್ಯದ ಬಲದಿಂದಲೇ.ಇಂದು ಜಾಗತೀಕ ಮಟ್ಟದಲ್ಲಿ ಎಲ್ಲಾ ದೇಶಕ್ಕೂ ವಿಜ್ಞಾನ ಹಾಗು ತಂತ್ರಜ್ಞಾನವನ್ನು ವಸ್ತುವಿನ ರೂಪದಲ್ಲಿ ಮನೆಮನೆಗೂ ಹಂಚುತ್ತಿರುವ ಜಪಾನ ಕೂಡಾ ಆಮಟ್ಟಕ್ಕೆ ಬೆಳೆದಿರುವುದು ಕೂಡಾ ತನ್ನ ಸ್ವಂತ ಬಲದಿಂದಲೇ.ಬಡ ಕುಟುಂಬದಿಂದ ಹುಟ್ಟಿ ದಲಿತರ ಬಂಧುವಾದ ಅಂಬೇಡ್ಕರ ಕೂಡಾ ನಂಬಿದ್ದು ಹಕ್ಕಿಯಂತೆ ರೆಕ್ಕೆಯನ್ನೆ ಹೊರತು ಪ್ರಭಲವಾಗಿದ್ದ ಕೊಂಬೆಯನ್ನಲ್ಲ.ನಾವು ಕೂಡಾ ನಮ್ಮ ಸ್ವಂತ ಬಲ ನಂಬಿ ಮುನ್ನಡೆದರೆ ಸ್ವಾವಲಂಬಿಯಾಗುತ್ತೇವೆ,ಜೊತೆಗೆ ಸಾಧಕರೂ ಆಗುತ್ತೇವೆ.

## ೯. ನಗ್ನ ಸತ್ಯಗಳು

–ಹನುಮಂತ ರಾಜು

ಹಳೆಯ ಬೇರುಗಳನ್ನೆ ಅಪ್ಪಿಕೊಂಡು ಅಪ್ಪ ಹಾಕಿದ ಆಲದ ಮರವನ್ನೆ ಇಂದಿಗೂ ಕೂಡ ನಂಬಿ ಬದುಕುತ್ತಿರುವ ಮಂದಿ ನಾವು. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಸಾಂದರ್ಭಿಕವಾಗಿ ಅನಾದಿಕಾಲದಿಂದಲೂ ಇಂದಿನತನಕ ಮಹಿಳೆಯರು ಮತ್ತು ಅಸ್ಪೃಶ್ಯರು ಸಮಾಜದ ತುಳಿತಕ್ಕೆ ಒಳಗಾಗಿ ಹಲವಾರು ರೀತಿಯಲ್ಲಿ ಒಂದಿಲ್ಲೊಂದು ತಾರತಮ್ಯಗಳನ್ನ ಎದುರಿಸುತ್ತಲೇ ಬಂದಿದ್ದಾರೆ.



ಇಂದು ಮುಂದು ನಾವೆಲ್ಲರೂ ಒಂದೆ ನಾವು ಮನುಜರು ಎಂದು ಶಾಲೆಯಲ್ಲಿ ಕೇಳಿ ಬರುತಲ್ಲಿದ್ದ ವಾಣಿಯನ್ನ ಎರಡು ಕಿವಿಗಳಲ್ಲಿ ಆಲಿಸಿ ಅರ್ದ ಮೈಲಿ ದೂರ ಕ್ರಮಿಸಿದೆ ಆ ದಿನ ಜೋಗರದೊಡ್ಡಿಯಲ್ಲಿ ಊರ ಹಬ್ಬ ಬಹಳ ವೈಭೋಗದಿಂದ ದೇವರ ಮೆರವಣಿಗೆ ಕುಣಿತ ಆರತಿಹೊತ್ತ ಹೆಣ್ಣುಮಕ್ಕಳ ಸಂಭ್ರಮ ಹೇಳ ತೀರದು ಒಂದು ಗುಂಪಿನ ಆರತಿ ಹೊತ್ತ ಹೆಣ್ಣುಮಕ್ಕಳು ಮಾರಮ್ಮನ ಗುಡಿಯನ್ನ ಲೀಲಾ ಜಾಲವಾಗಿ ಪ್ರವೇಶಿಸಿದರು ಸ್ವಲ್ಪ ಕಣ್ಣನ್ನ ಬಲಗಡೆ ತಿರುಗಿಸಿ ನೋಡಿದರೆ ಮೋರಿಯ ಪಕ್ಕದಲ್ಲಿ ಪೂಜಾರಿಯ ತೀರ್ಥಕ್ಕಾಗಿ ಕಾದು ಕುಳಿತ ಮತ್ತೊಂದು ಗುಂಪು, ಬಟ್ಟಲಲ್ಲಿ ತೀರ್ಥ ಬೇವಿನ ಸೊಪ್ಪನ್ನ ಹಿಡಿದು ಬಂದವ ದೂರದಲ್ಲಿ ನಿಂತು ಕೈ ಮೇಲೆತ್ತಿ ತೀರ್ಥ ಚುಮುಕಿಸಿದ ಅದನ್ನೆ ಪ್ರಸಾದವೆಂದು ಸ್ವೀಕರಿಸಿ ಕೈ ಮುಗಿದು ಹೋಗುತ್ತಿದ್ದವರ ಬಳಿ ಹೋಗಿ ಕೇಳಿದೆ ಏನಮ್ಮ! ನೀವು ಏಕೆ ದೇವಸ್ಥಾನದ ಒಳಗೆ ಹೋಗುವಂತಿಲ್ಲ? ಎಂದಾಗ ನೀಲಿ ಸೀರೆ ಹಸಿರು ಕುಪ್ಪಸದ ಹೆಣುಮಗಳು ಹೇಳಿದಳು ರೀ, ಸಣ್ರ ಅವರು ಮೇಲು ಜಾತಿಯವರು ನಾವು ಮಾದಿಗರು ನಾವೆಲ್ಲಾದ್ರು ದೇವಸ್ಥಾನದ ಒಳಗೆ ಹೋಗೊದುಂಟಾ! ಇಲ್ಲಾ, ನಾವೆಲ್ಲಾ ಹಂಗೆ ಹೊಗಂಗಿಲ್ಲ ಇದು ನಮ್ಮ ತಾತ ಮುತ್ತಾತನ ಕಾಲದಿಂದ ನಡೆದ್ ಬಂದಿದೆ ನಾವು ಈಗ್ಲು ಕೂಡ ಗೌಡ್ರು, ಗಾಣಿಗರ ಮನೆಗೊಳ್ಗೆ ಹೋಗಂಗಿಲ್ಲ ಎಂದು ಹೇಳಿದ ಆಕೆಯ ಹೆಸರು ಕೆಂಪಮ್ಮ. ಇಂದಿಗೂ ಕೂಡ ಮನುವಾದಿ ಸಂಘಟನೆಗಳು ನಮ್ಮನ್ನ ಆಳುತ್ತಿವೆ ಎಂಬುದಕ್ಕೆ ಇದು ನಗ್ನ ಸಾಕ್ಷಿಯಾಗಿದೆ.

ಅಸ್ಪೃಶ್ಯತೆಯ ಆಚರಣೆ ಇಂದಿಗೂ ಕೂಡ ಜೀವಂತವಾಗಿಯೇ ಇದೆ ಹೋಟೆಲ್ಲುಗಳಿಗೆ, ದೇವಸ್ಥಾನದ ಒಳಗೆ, ಮೇಲ್ಜಾತಿಯವರ ಮನೆಯ ಒಳಗೆ ಅಸ್ಪೃಶ್ಯರ ಪ್ರವೇಶವೆ ನಿಷಿದ್ಧ ಸತ್ತ ಹೆಣಗಳನ್ನು ಹೂಳುವ, ತಮಟೆ ಹೊಡೆಯುವ, ಧಣಿಗಳ ಮನೆಯಲ್ಲಿ ಜೀತಮಾಡುವ, ಚೋಮನಂತಹ ಎಷ್ಟೋಮಂದಿ ನಮ್ಮ ಕಣ್ಮುಂದೆ ಜೀವಂತ ಶವಗಳಾಗಿ ನಡೆದಾಡುತಿದ್ದಾರೆ. ಆದಿ ಕವಿ ಪಂಪ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಹೇಳಿದ ಮಾತುಗಳು ಇಂದು ಕೇವಲ ಗೋರಿಯ ಮೇಲಿನ ಬರಹಗಳಾಗಿವೆಯಷ್ಟೇ? ಸುರಪುರದ ಕೆಂಭಾವಿಯ ಹೋಟೆಲೊಂದರಲ್ಲಿ ಚಾ ಕುಡಿಯಲು ಕುಳಿತಿದ್ದಾಗ ಮಾಸಲು ಬಟ್ಟೆಯ ಗಡ್ಡದಾರಿ ವ್ಯಕ್ತಿಯೊಬ್ಬ ಸೂರಿನಲ್ಲಿ ಸಿಕ್ಕಿಸಿದ್ದ ಲೋಟವನ್ನ ತೊಳೆದು ದೂರದಲ್ಲಿ ಕುಳಿತು ಚಾ ಕುಡಿದು ಮತ್ತೆ ಲೋಟವನ್ನ ತೊಳೆದು ಮೊದಲ್ಲಿದ್ದ ಜಾಗದಲ್ಲಿಯೇ ಇಟ್ಟು ಹೊರಟುಹೋದ ಈ ದೃಶ್ಯ ನನ್ನ ಕಣ್ಣಿನಿಂದ ದೂರವಾಗುವ ಮುನ್ನವೇ ಮಾಲಿಕನನ್ನ ವಿಚಾರಿಸಿದಾಗ ಅವನೊಬ್ಬ ಅಸ್ಪೃಶ್ಯ ಎಂದು ತಿಳಿಯಿತು..

'ಕೋಣ ಮರಿ ಹಾಕ್ತು ಕೊಟ್ಟಿಗೆಗೆ ಕಟ್ಟು' ಎಂಬ ಗಾದೆಯಂತೆ ಮಗಳು ದೊಡ್ಡವಳಾದಳು ಎಂಬ ಸುದ್ದಿ ತಿಳಿಯುತಿದ್ದಂತೆ ತಂದೆ ತಾಯಿಗಳು ಅವಳಿಗೆ ಮದುವೆ ಮಾಡಲು ಮುಂದಾಗುತ್ತಾರೆ. ದೇವಾಪುರದ ಅರಳಹಳ್ಳಿ ಶಾಲೆಯ 7 ನೇ ತರಗತಿಯ ವಿದ್ಯಾರ್ಥಿನಿ ಸುಮ ಹೇಳಿದಳು ನಮ್ಮನೇಲಿ ನನಗೆ ಮದ್ವೆ ಮಾಡೋಕೆ ತಯಾರಿ ನಡುಸ್ತಿದ್ದಾರೆ ಆದರೆ ನನ್ನ ತಮ್ಮ ಚೆನ್ನಾಗಿ ಓದ್ಬೇಕು ಅನ್ನೋದೆ ನನ್ನ ತಂದೆ ತಾಯಿಗಳ ಆಸೆ ಏಕೆ ಹೀಗೆ ನನ್ನ ತಮ್ಮನಿಗೆ ಒಂದು ನ್ಯಾಯ ನನಗೆ ಒಂದು ನ್ಯಾಯನಾ? ಎಂಬ ಆಕೆಯ ಧೀರ ಪ್ರಶ್ನೆ ಇಂದಿಗೂ ಕೂಡ ನನ್ನನ್ನ ಆಲೋಚನೆಗೆ ದೂಡಿದೆ ಹೆಣ್ಣು ಮಕ್ಕಳಿಗೆ ಮನೆಯಲ್ಲಿ ನಡೆಯುವ ಶೈಕ್ಷಣಿಕ ತಾರತಮ್ಯಕ್ಕೆ ಇದು ಒಂದು ಉದಾಹರಣೆಯಾಗಿದೆ. ಹೆಣ್ಣೆಂದರೆ ದರ್ಬಲ ಗಂಡೆಂದರೆ ಬಲಿಷ್ಠ ಎಂಬ ಭಾವನೆಯ ಆದಾರದ ಮೇಲೆ ವೇತನ ನಿರ್ಣಯ. ಇಬ್ಬರು ಮಾಡುವುದು ಕೂಲಿ ಕೆಲಸವೇ ಆದರೆ ಆಕೆಗೆ 100 ಈತನಿಗೆ 200 ರೂ ಕೂಲಿ ನಿಗದಿ. ಇಂದಿಗೂ ಕೂಡ ಗಂಡ ಊಟ ಮಾಡಿದ ಬಳಿಕ ಹೆಂಡತಿ ಊಟಮಾಡಿ ಮಲಗಬೇಕು ಗಂಡನೆಂಬ ಅಧಿಕಾರ ಹೆಣ್ಣೆಂಬ ಕೂಲಿ ಆಳು ಎಷ್ಟು ಸತ್ಯ ಎಷ್ಟು ಮಿತ್ಯ.

ಇಂದು ಎಷ್ಟೆಲ್ಲಾ ವಿದ್ಯಮಾನಗಳು ಘಟಿಸುತಿದ್ದರು ಸ್ಪೃಶ್ಯ ಅಸ್ಪೃಶ್ಯ ಹೆಣ್ಣು ಗಂಡು ಎಂಬ ತಾರತಮ್ಯ ಇಂದಿಗೂ ಕೂಡ ಜೀವಂತವಾಗಿವೆ. ರಾಜಕೀಯದಲ್ಲಿ ಮಹಿಳೆಯರ ಪಾತ್ರವನ್ನ ಗಮನಿಸಿ ಪ್ರಸ್ತುತ ಅಂಕಿ ಅಂಶಗಳನ್ನು ಪರಿಗಣಿಸಿದರೆ ನಮಗೆ ತಿಳಿಯುತ್ತದೆ ಸ್ತ್ರೀಯರ ಸ್ಥಾನಮಾನ ಯಾವ ಹಂತದಲ್ಲಿ ಬೆಳೆಯುತ್ತಿದೆ ಎಂಬುದು. ಕೇವಲ ಶೇಕಡ 30% ರಷ್ಟು ಮಾತ್ರ ಆಕೆಗೆ ಮೀಸಲು ಇದು ಕೊಟ್ಟಿದಲ್ಲ ನಿರಂತರ ಹೋರಾಟದಿಂದ ಬಂದಿರುವಂತದ್ದು ಸ್ತ್ರೀ ಏನನ್ನಾದರು ಪಡೆಯಬೇಕೆಂದಿದ್ದರೆ ಅದು ಹೋರಾಟದ ಫಲವಾಗಿಯೇ ದಕ್ಕುವಂತದ್ದು. ಸ್ವಾತಂತ್ರ ನಂತರದ ಭಾರತದಲ್ಲಿ ಕಾನೂನು ಮಂತ್ರಿಯಾಗಿದ್ದ ಡಾ// ಬಾಬಾ ಸಾಹೇಬ್ ಅಂಬೇಡ್ಕರವರು ಸ್ತ್ರೀ ಸ್ವಾತಂತ್ರದ ಕರಿತು ಹಿಂದೂ ಕೋಡ್ ಬಿಲ್ ಜಾರಿಗೆ ಬರಬೇಕೆಂದು ಸಭೆಯಲ್ಲಿ ಮಂಡಿಸಿದರು ಆದರೆ ಅದು ಕಾನೂನಾಗಿ ಹೊರಬರದೆ ಸಭೆಯಲ್ಲಿಯೇ ಮುರಿದು ಬಿತ್ತು ಅಂದೆ ಬಾಬಾ ಸಾಹೇಬರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟರು ಇದಕ್ಕೆ ಕಾಣದ ಕೈಗಳಾಗಿ ಕೆಲಸ ಮಾಡಿದ ಮನುವಾದಿ ವಿಕೃತ ಮನಸ್ಥಿತಿಗಳೇ ಮೂಲ ಕಾರಣ ಇಂದು ಅದೇ ಮನಸ್ಥಿತಿಗಳು ಸ್ತ್ರೀ ಸ್ವಾತಂತ್ರಕ್ಕೆ ಅನರ್ಹಳು ಎಂದು ಬೊಬ್ಬೆ ಹೊಡೆಯುತ್ತಿವೆ. ಆಧುನಿಕ ಸಮಾಜದಲ್ಲಿ ಎಷ್ಟೇ ಬದಲಾವಣೆಯ ಗಾಳಿ ಬೀಸಿದರು ಕೂಡ ಅದು ಮತ್ತೊಂದು ರೀತಿಯ ರೂಪವನ್ನ ಪಡೆಯುತ್ತಾ ಮುಂದೆ ಸಾಗುತ್ತಲಿದೆ.

ಹೊಸ ವರುಷದ ಹಸಿರು ತೋರಣ ವಸಂತನನ್ನ ಬಹಳ ವಿಜೃಂಭಣೆಯಿಂದ ಸ್ವಾಗತಿಸುತ್ತಿದೆ. ಕಹಿ ಬೇವಿನ ಜೊತೆ ಸಿಹಿ ಬೆಲ್ಲದ ಮಿಶ್ರಣ ಎರಡರ ಸಂಗಡ ಬಲು ಪ್ರಿಯವಾದುದು ಮತ್ತೊಂದೆಡೆ ಎಣ್ಣೆ ಸೀಗೆಕಾಯಿಯ ತಿಕ್ಕಾಟ ಒಂದನ್ನೊಂದು ಎಂದಿಗೂ ಕೂಡಿಸಲಾಗದ ಸಂಬಂಧ ಹೊಸ ಬಟ್ಟೆ ಮನಸ್ಸು ಹಳೆಯದೆ ಮನುಷ್ಯರೂ ಕೂಡ ಸಂಪ್ರದಾಯವಾದಿಗಳೇ. ದಲಿತರಿಗೆ ತೀರ್ಥ ಕುಡಿಸಿದರೆ ಸಾಕು ಅವರು ಶುದ್ದಿಯಾಗುತ್ತಾರೆ ಎಂದು ದಲಿತೋದ್ದಾರದ ಕುರಿತು ಬೊಗಳೆ

ಬಿಡುವ ಮಠಾಧೀಶರು ದಲಿತರ ಕೇರಿ ಪ್ರವೇಶಿಸುವುದರಲ್ಲಿ ಹಾಗು ಅವರೊಟ್ಟಿಗೆ ಊಟ ಮಾಡಲು ಮಾತ್ರ ಹಿಂದೆ ಸರಿಯುತ್ತಾರೆ ಏಕೆ ಈ ರೀತಿಯ ಮನೋಭಾವನೆ ಅವರೂ ಕೂಡ ಸಾಂಸ್ಕೃತೀಕರಣದ ಚಹರೆಯನ್ನು ಹೊತ್ತವರೇ ಆಗಿದ್ದಾರೆ. ಸ್ತ್ರೀ ದೇವಾಲಯದ ಅರ್ಚಕಿಯಾದರೆ ಮುಳ್ಳಿನ ಹಾಸಿಗೆಯ ಮೇಲೆ ಕುಳಿತಂತೆ ಕೂರಲು ಆಗದೆ ನಿಲ್ಲಲೂ ಆಗದೆ ತಡಬಡಾಯಿಸುತ್ತಾರೆ.

ಇನ್ನಾದರು ಮನುವಾದಿ ಮನಸುಗಳು ತಮ್ಮ ನಿಲುವುಗಳಲ್ಲಿ ಬದಲಾವಣೆಗಳನ್ನ ಕಂಡುಕೊಳ್ಳಬೇಕಾಗಿದೆ. ಸ್ವಲ್ಪಮಟ್ಟಿಗಾದರು ಜನರು ಜಾಗೃತಗೊಂಡು ಶಿಕ್ಷಿತರಾದಾಗ ಮಾತ್ರ ತಾರತಮ್ಯದ ಬುಡವನ್ನ ಅಲುಗಾಡಿಸಲು ಸಾದ್ಯ. ನಾನು 7 ನೇ ತರಗತಿಯ ವಿದ್ಯಾರ್ಥಿನಿ ಸುಮಾಳಿಗೆ ಆರ್.ಟಿ.ಇ ಕಾಯ್ದೆಯ ಕರಿತು ಅರಿವು ಮೂಡಿಸಿದೆ ಇದನ್ನ ಕೇಳಿದ ಆ ಯುವತಿ ಪ್ರಶ್ನೆ ಮಾಡುವ ಮನೋಭಾವನೆಯನ್ನ ಬೆಳೆಸಿಕೊಂಡಳು. ಶಾಲೆ ಮುಗಿದ ಬಳಿಕ ಮನೆಗೆ ಮರಳಿ ರಾತ್ರಿ ತನ್ನ ತಂದೆಯನ್ನ ಪ್ರಶ್ನಿಸಿದ ರೀತಿಯನ್ನ ಮರುದಿನದ ತರಗತಿಯಲ್ಲಿ ವಿವರವಾಗಿ ಹೇಳಿದಳು ಆಗ ನನ್ನ ಮಾತುಗಳು ಸಾರ್ಥಕವೆನಿಸಿದವು. ಕೆಂಪಮ್ಮ, ಕರಿಯಪ್ಪನಂತಹ ಮನಸ್ಸುಗಳು ಸಂಧಾನಕ್ಕೆ ಕಾರಣವಾಗುತ್ತವೆ ತಲೆಮಾರುಗಳು ಉರುಳಿದಂತೆ ಬದಲಾವಣೆ ತನ್ನ ಅಸ್ಥಿತ್ವವನ್ನು ಪಡೆದು ಬೆಳೆಯುತ್ತದೆ ಎಂಬುದು ನಾನು ಕಂಡುಕೊಂಡ ನಂಬಿಕೆಯಾಗಿದೆ.

***

## ೧೦. ತುಂಬಾ ವಿಚಿತ್ರ ಅಲ್ವಾ ಗೆಳೆಯರೆ

**–ರೇಣುಕಾ ಹೆಗ್ಗನದೊಡ್ಡಿ**



ಚಿಕ್ಕ ವಯಸ್ಸಿನಲ್ಲಿ ಮದುವೆ ಅಂದರೆ ಏನು? ಅಂತ ಗೋತ್ತಿಲ್ಲ.
ಆದರು ಸಶಿ ಹಬ್ಬದಲ್ಲಿ ಮದುವೆ ಆಟ ಆಡುವ
ಮಕ್ಕಳ ಮನಸ್ಸದು.

ಸಂಸಾರದ ಅರಿವೂ, ಪರಿಕಲ್ಪನೆಗಳೆ ಇರುವುದಿಲ್ಲ,
ಆದ್ರು ಪುಟ್ಟ ಗುಡೊಂದನ್ನ ಕಟ್ಟಿ, ಆಟದಲ್ಲಿ ಇರಿಸುವರು
ಮನೆ, ಗಂಡ, ಹೆಂಡತಿ, ಮಕ್ಕಳನ್ನ
ಮದುವೆ ಆಟ ಆಡುವ ಮಕ್ಕಳ ಚುಲುಮೇಯ ಕನಸ್ಸದು.

ಹಾಗೆ ಆ ವಯಸ್ಸಿನಲ್ಲಿ ಮಗು ಹೇಗೆ ಜನಿಸುತ್ತದೆ? ಅಂತ ಗೊತ್ತಿಲ್ಲ.
ಆದರು ಆಟದಲ್ಲಿ ಒಂದು ಪುಟ್ಟ ಮಗು ಇರುತ್ತದೆ.
ಇದು ಎಷ್ಟು ವಿಚಿತ್ರ ಅಂತ ಅನಿಸುತ್ತದೆ ಅಲ್ವಾ ಗೆಳೆಯರೆ.?
ಆದರೆ ಆ ಪುಟ್ಟ ವಯಸ್ಸಿನಲ್ಲಿ ಎಲ್ಲಾ ಮಕ್ಕಳು ಆಡುವ
ಸಣ್ಣ ಪುಟ್ಟ ಆಟಗಳು ಕಣ್ರೀ ಇವು.


***

## ೧೧. ಬದುಕನ್ನು ಎಂಜಾಯ್ ಮಾಡೋಣ.

**–ಅನ್ವರ ಎಮ್.**

ಮನುಷ್ಯ ಜೀವನೋಪಾಯಕ್ಕಾಗಿ ಒಂದಿಲ್ಲೊಂದು ಕಾಯಕದಲ್ಲಿ ತೊಡಗಿಕೊಂಡಿರುತ್ತಾನೆ. ಕೆಲವರು ಸ್ವಂತ ವ್ಯಾಪರ, ಇನ್ನೂ ಕೆಲವರು ಸರಕಾರಿ ಕೆಲಸ, ಬೇರೆಯವರಲ್ಲಿ ಕೆಲಸ ಮಾಡುವುದು, ಕೌಶಲ್ಯಭರಿತ ಉದ್ಯೋಗ ಅಂದರೆ, ಮೆಕ್ಯಾನಿಕ, ಟೇಲರ್, ರಿಪೇರಿ. ಹೀಗೆ ಹಲವಾರು ವೈವಿಧ್ಯಮಯ ಕೆಲಸ ಮಾಡುತ್ತಾ ತನ್ನ ದಿನನಿತ್ಯದ ಬದುಕನ್ನು ಸಾಗಿಸುತ್ತಾನೆ. ಹೀಗೆ ಮಾನವ ತನ್ನ ವೃತ್ತಿ ಬದುಕಿನೊಂದಿಗೆ ಹೆಚ್ಚು ಸಮಯ ಕೊಡುತ್ತಾ, ತನ್ನ ನಿಜವಾದ ಬದುಕನ್ನು ಮರೆಮಾಚುತ್ತಾನೆ.

ನಮ್ಮ ಜೀವನದ ಒಂದು ಭಾಗವಾಗಿರುವ ವೃತ್ತಿ ಬದುಕು, ಈ ಕಾಯಕ ಕ್ರಮೇಣ ನಮಗರಿವಿಲ್ಲದೆಯೇ ಇಡೀ ಜೀವನವಾಗಿರುತ್ತದೆ. ನಾವು ಇದನ್ನು ಕುರಿತು ತುಂಬಾ ಸೂಕ್ಷ್ಮವಾಗಿ ಯೋಚಿಸಬೇಕು. ನಾವೆಲ್ಲರೂ ಸಾಮಾನ್ಯವಾಗಿ ಹೆಂಡತಿ, ಮಕ್ಕಳು, ತಂದೆ,ತಾಯಿಯರು ಎಲ್ಲರೂ ಚೆನ್ನಾಗಿರಲು ಯಾವುದಾರೊಂದು ಕಾಯಕದಲ್ಲಿ ತೊಡಗಿರುತ್ತೇವೆ. ಆದರೆ ಆ ಕಾಯಕವೇ ಎಷ್ಟೋ ಸಲ ಈ ಪ್ರೀತಿಯನ್ನು ಕಸಿದುಕೊಳ್ಳುತ್ತದೆ.




ನಾವುಗಳು ವೃತ್ತಿ ಜೀವನವನ್ನು ವೃತ್ತಿಯಾಗಿ ನೋಡಬೇಕೇ ಹೊರತು ಜೀವನನೇ ಅದೂ ಅಂತಾ ಅಲ್ಲ, ಅಂದಾಗ ಮಾತ್ರ ನಾವು ಎರಡನ್ನೂ ತುಂಬಾ ಸಮನ್ವಯತೆಯನ್ನು ತಂದುಕೊಳ್ಳವುದು ತೀರಾ ಅನಿವಾರ್ಯ.

ವೃತ್ತಿ ಬದುಕಿನ ವಿಷಯುಗಳನ್ನು ಮನೆಯಲ್ಲಿ ತರುವುದು, ಅಥವಾ ಮನೆ ವಿಷಯಗಳನ್ನು ವೃತಿ ಬದುಕಿನಲ್ಲಿ ತರುವುದು ಯಾವತ್ತು ಮಾಡಬಾರದು, ಈ ವಿಷಯ ನಮ್ಮ ಎರಡೂ ಕ್ಷೇತ್ರದಲ್ಲಿ ನಮ್ಮ ನೆಮ್ಮದಿಯನ್ನು ಕೆಡಸುತ್ತದೆ.

ನಾವುಗಳು ನಮ್ಮ ವೃತ್ತಿ ಬದುಕಿನ ಸಮಯದ ನಂತರ, ಮನೆಯವರೊಂದಿಗೆ, ಮಕ್ಕಳೊಂದಿಗೆ, ತಂದೆ, ತಾಯಿ, ಸ್ನೇಹಿತರೊಂದಿಗೆ, ನೆರೆಹೊರೆಯವರೊಂದಿಗೆ ಅವರಿಗೋಸ್ಕರ ಸಮಯ ಮಾಡಿಕೊಂಡು, ಅವರೊಂದಿಗೆ ಕುಶಲೋಪರಿಯನ್ನು ವಿಚಾರಿಸಿಕೊಳ್ಳಬೇಕು, ಅಂದಾಗ ಮಾತ್ರ ನಾವು ಸಮಾಜ ಜೀವಿಯಾಗಿರಲು ಸಾಧ್ಯ. ನಾವು ಬೇರಯವರೆ ಕಾರ್ಯಕ್ರಮಗಳಿಗೆ ಹೋಗದೆ ಅವರುಗಳು ಮಾತ್ರ ಬರಲಿ ಎಂದು ಬಯಸಿದರೆ ಹೇಗೆ ಬರಲು ಸಾಧ್ಯ, ಹೀಗೆ ನಮ್ಮ ಸಮಯ ಕೊಡುವುದೆಂದರೆ ಮುಖಾಮುಖಿಯಾಗಿರಬಹದು, ಫೋನ್ ಮೂಲಕವು ನಮ್ಮ ಸಂಬಂಧ ಗಟ್ಟಿಗೊಳಿಸಬಹದು.

ನಾವು ನಮ್ಮ ಖಾಸಗಿ ಜೀವನದಲ್ಲಿ ನೆಮ್ಮದಿಯಿಂದ ಇದ್ದಾಗ ಮಾತ್ರ ನಮ್ಮ ವೃತ್ತಿ ಬದುಕಿನಲ್ಲಿಯೂ ಸಹ ನೆಮ್ಮದಿಯಿಂದ, ಲವಲವಿಕೆಯಿಂದ ಕೆಲಸ ಮಾಡಲು ಸಾಧ್ಯ. ಎರಡೂ ಜೀವನವನ್ನು ನಾವು ಸಮನ್ವಯತೆಯಿಂದ ರೂಪಿಸಲು ನಮ್ಮಿಂದಲೇ ಮಾತ್ರ ಸಾಧ್ಯ. ನಾವು ತುಂಬಾ ಸಲ ಸ್ನೇಹಿತರಿಗೆ, ಅಥವಾ ನೆಂಟರಿಗೆ ಬಹಳ ಸಲ ಹೀಗೆ ಹೇಳುತ್ತೇವ ಬಿಡುವಿಲ್ಲದ ಕೆಲಸದಲ್ಲಿದ್ದೇನೆ, ನಿಜವಾಗಿ ಯೋಚಿಸಿದರೆ ನಾವು ಬಿಡುವು ಮಾಡಿಕೊಳ್ಳಬಹದು, ಅಂತಹ ಕೆಲಸ ಮಧ್ಯ ನಮಗೆ ಬೇಧಿಯಾದರೆ ನಾವು ಹೋಗುವುದಿಲ್ಲವೇ? ಯೋಚಿಸಿ ನಮ್ಮ ವೃತ್ತಿ ಬದುಕು ಮತ್ತು ಜೀವನ ಎರಡನ್ನೂ ಸಮನ್ವಯತೆಯಿಂದ ಜೀವನ ಸಾಗಿಸೋಣ, ಬದುಕನ್ನು ಎಂಜಾಯ್ ಮಾಡೋಣ.

***

## ೧೨. ಚೆಲುವಿನ ಬಲೆ

**–ಹನುಮಂತ ರಾಜು**



ಮೀನಿನ ಹೆಜ್ಜೆಯ ಗಾಜಿನ ಸದ್ದು
ಮಿಣುಕು ಹುಳುವೊಂದು ಅಳುಕಿ ಬಳುಕಿದೆ
ಕತ್ತಲೆ ಬೆಳಕಿನ ಆಟದ ನಡುವೆ
ದಾರಿ ಕಾಣದೆ ಜಿನುಗುತ ತೆವಳುವೆ
ನಿನ್ನ ಮನಸ್ಸಿನ ಪುಟವ ತೆರೆದು ಓದಲೆ

ಪೀಡಿಸಿ ಕಾಡಿಸುವೆ ನಿದ್ರೆಯ ಮಂಪರಲಿ
ಬಿಂಬ ಕಾಣದು ಮಬ್ಬುಗತ್ತಲಲ್ಲಿ
ದೀಪದ ಬುಟ್ಟಿಯ ಅಡಿಯಲ್ಲಿ ನಿನ್ನ ನೆನಪು
ನಿನ್ನನ್ನೆ ಕಾಣುವೆ ಅಳುಕುವ ಬೆಳಕಲಿ
ನಿನ್ನ ಮನಸ್ಸಿನ ಪುಟವ ತೆರೆದು ಓದಲೆ

ನಿಂತಲ್ಲೂ ನೀನೆ ಕುಂತಲ್ಲೂ ನೀನೆ ಅತಿತ್ತ ತಿರುಗಿ
ಸುತ್ತಲೂ ಹೋದರೆ ತಂಗಾಳಿ ತಂಪಲ್ಲಿ
ಹೂವಿನ ಕಂಪಲ್ಲಿ ಓಡೋಡಿ ಬರುವೆ ಕೈ ಬೀಸಿ ಕರೆವೆ
ತುಸು ನಗೆ ಬೀರಿ ಕರಗಿ ಹೋಗುವೆ
ನಿನ್ನ ಮನಸ್ಸಿನ ಪುಟವ ತೆರೆದು ಓದಲೆ

ಚುಕ್ಕಿ ಚಂದ್ರಮನ ಹಾಲ್ಬೆಳದಿಂಗಳ ಕೋಟಿ
ಕನಸುಗಳ ಮೀಟಿ ಈಟಿ ತೆಗೆದು
ವಸುಂಧರೆಯ ಭೂ ಗರ್ಭದಲ್ಲಿ ವನಸುಮಗಳು
ವಸಂತನ ತುಸು ಕೈಬೀಸಿ ಕರೆದಿವೆ
ನಿನ್ನ ಮನಸ್ಸಿನ ಪುಟವ ತೆರೆದು ಓದಲೆ

ನೀಲ್ಗಡಲಲಿ ತೇಲಿ ಮಿಂದೇಳುತಿದೆ ಮನಸ್ಸು
ಮಂತ್ರವಾದಿಯ ದಂಡ ಕಮಂಡಲ
ಸುಟ್ಟ ಹೆಣಗಳ ಬೂದಿಯ ನಡುವೆ ಬೇವು
ಮಾವಿನ ಸಿಹಿಯ ತೋರಣ
ನಿನ್ನ ಮನಸ್ಸಿನ ಪುಟವ ತೆರೆದು ಓದಲೆ

ಅಖಾಡದಲ್ಲಿ ಜಂಗಿ ಕುಸ್ತಿ ಭಂಗಿಯ ಸೇದುತ
ನಿಂತ ಸನ್ಯಾಸಿ ಸುಡುವ ಬಿಸಿಲನು ತಡಿಗೆ ಸರಿಸಿ
ತೀರ್ಥ ಪ್ರಸಾದವ ಜೋಳಿಗೆಗೆ ಇರಿಸಿ ಸುಪ್ತ ಸ್ವಪ್ನವ
ಮನಸ್ಸಲ್ಲಿ ನೆನೆದು ಎಣೆದುಕೊಂಡನು ಚೆಲುವಿನ ಬಲೆಯ
ನಿನ್ನ ಮನಸ್ಸಿನ ಪುಟವ ತೆರೆದು ಓದಲೆ

***

## 13. Cool Clicks: Guru Moger



**Bayalu Coordinators:**


1. **Gulbarga: Gundappa Katekar:** *gundappa.katekar@azimpremjifoundation.org*
2. **Mandya: Ravi B T:** *ravi@azimpremjifoundation.org*
3. **Bangalore: Raghavendra Herle:** *raghavendra.herle@azimpremjifoundation.org*
4. **Yadgir: Rajashri Nayak**: *rajashri.nayak@azimpremjifoundation.org*